**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |

# ಬೃಹಚ್ಚರಣ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 250/- |

ಸಂಪುಟ : 5 ಸಂಚಿಕೆ : 2 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಜೂನ್ 2015


## ಅರ್ಪಣೆ



ಈ ಸಂಚಿಕೆಯನ್ನು ನಮ್ಮ ಸಮುದಾಯದ ಹಿತೈಷಿಗಳಾದ **ರಾಜಾಪುರ ಶಿರಸ್ತೇದಾರ್ ಕೃಷ್ಣಮೂರ್ತಿ** ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಲಾಗಿದೆ

## 2014-15ರ ಸರ್ವ ಸದಸ್ಯರ ಸಭೆಯ ವಿಶೇಷಾಂಕ




## ಸಂಪಾದಕೀಯ

*ಆತ್ಮೀಯರೇ ನಮಸ್ಕಾರ*

ಕಾರ್ಯಕಾರಿ ಸಮಿತಿಯ ಸೂಚನೆಯಂತೆ ಜುಲೈ ಮೊದಲ ವಾರದಲ್ಲಿ ಬರಬೇಕಾಗಿದ್ದ ಈ ಸಂಚಿಕೆಯು 2014–15ರ ಸರ್ವ ಸದಸ್ಯರ ಸಭೆಯ ವಿವರಗಳನ್ನು ನೀಡುವ ಸಲುವಾಗಿ ಸ್ವಲ್ಪ ವಿಳಂಬವಾಗಿರುವುದಕ್ಕೆ ವಿಷಾದಿಸುತ್ತೇವೆ.

ಸಂಘದ ಸದಸ್ಯರ ಮನೆಯಲ್ಲಿ ಶುಭ ಸಮಾರಂಭ ನಡೆಯುವಾಗ ಹಿರಿಯರ ಹೆಸರಿನಲ್ಲಿ 'ಬೃಹಚ್ಚರಣ' ಪತ್ರಿಕೆಗೆ ತಮ್ಮ ಕೈಲಾದ ವಂತಿಗೆಯನ್ನು ಸದಸ್ಯರು ನೀಡುತ್ತಿರುವುದು ಸಂತಸ ತಂದಿದೆ. ಸಂಸ್ಥೆ, ವ್ಯಕ್ತಿಗಿಂತ ದೊಡ್ಡದು ಎಂದು ಬೆಳೆಯಲು ಸಹಕರಿಸುತ್ತಿರುವ ಇತರರಿಗೂ ಇದು ಅನುಕರಣೀಯ. ಸಂಪಾದಕ ಮಂಡಲಿಯಿಂದ ಇವರಿಗೆಲ್ಲಾ ಧನ್ಯವಾದಗಳು.



ನಿಮ್ಮವ

■ **ಕೆ.ಸಿ.ನಟರಾಜನ್**

ಸಂಪಾದಕ, 9845113475

## ಅಭಿನಂದನೆಗಳು

ತಾ. 05.07.2015ರಂದು ನಡೆದ ಸರ್ವ ಸದಸ್ಯರ ಸಭೆಯ ಭೋಜನದ ವೆಚ್ಚ ರೂ. 36,000–00 ಗಳನ್ನು ತಟ್ನಹಳ್ಳಿಯ ಶ್ರೀ ಶ್ರೀಕಂಠಶರ್ಮ ಮತ್ತು ಕುಟುಂಬದವರು ಭರಿಸುವುದಾಗಿ ಸಭೆಯಲ್ಲಿ ವಾಗ್ದಾನ ಮಾಡಿರುತ್ತಾರೆ.

ಅವರಿಗೂ ಹಾಗೂ ಅವರ ಕುಟುಂಬಕ್ಕೆ ಸಂಘದ ಪರವಾಗಿ ಧನ್ಯವಾದಗಳು.

**–ಸಂ.**

## ಅಧ್ಯಕ್ಷರ ನುಡಿ

*ಆತ್ಮೀಯ ಬಂಧುಗಳೇ, ನಮಸ್ಕಾರ.*

ಶ್ರಾವಣ ಮಾಸದ ಹಬ್ಬಗಳ ಸಾಲು ಪ್ರಾರಂಭವಾಗಲಿದ್ದು, ನಮ್ಮ ಸಮುದಾಯದ ಕುಟುಂಬದವರೆಲ್ಲರಿಗೂ ಸಂಘದ ಶುಭಾಶಯಗಳು.

ಈ ತ್ರೈಮಾಸಿಕ ಸಂಚಿಕೆಯೊಂದಿಗೆ ವಿಶೇಷವಾಗಿ 2014–15ರ ಸರ್ವ ಸದಸ್ಯರ ಸಭೆಯ ಕಾರ್ಯ ಕಲಾಪಗಳನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ಸುಮಾರು 250ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದ ಸಭೆಯಲ್ಲಿ ಹಿಂದಿನ ವರ್ಷದ ಆಯವ್ಯಯ ಮಂಡನೆಯನ್ನು ಮಂಡಿಸಿದ್ದು, ಸದಸ್ಯರು ಸರ್ವಾನುಮತದಿಂದ ಅನುಮೋದನೆ ನೀಡಿರುವುದಕ್ಕೆ ಸಂತೋಷ ವ್ಯಕ್ತಪಡಿಸುತ್ತೇನೆ. ಹಿಂದಿನ ವರ್ಷದಂತೆಯೇ ಈ ವರ್ಷವೂ ಸಮುದಾಯದ 18 ಹಿರಿಯ ಚೇತನರನ್ನೂ ಹಾಗೂ 24 ಪ್ರತಿಭಾವಂತ ವಿದ್ಯಾರ್ಥಿಗಳನ್ನೂ ನಮ್ಮ ಹಿರಿಯರೇ ಪುರಸ್ಕರಿಸಿದರು.

ಸದಸ್ಯರ ಸೂಚನೆಯಂತೆ ಸಂಘದ ಕಚೇರಿಗಾಗಿ ಸ್ವಂತ ಕಟ್ಟಡವನ್ನು ಹೊಂದುವ ಸೂಚನೆಯ ಮೇರೆಗೆ, ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರು ಈ ವಿಚಾರದಲ್ಲಿ ಅಗತ್ಯವಾದ ನಿವೇಶನಕ್ಕೆ ಸುಮಾರು 40 ಲಕ್ಷ ರೂಪಾಯಿಗಳ ಅವಶ್ಯಕತೆಯಿದ್ದು, ಇದನ್ನು ಸದಸ್ಯರು ಸಂದಾಯ ಮಾಡುವ ಬಗ್ಗೆ ಕೋರಿದರು. ಇದಕ್ಕೆ ಬಹುತೇಕ ಸದಸ್ಯರು ಸಹಮತ ವ್ಯಕ್ತಪಡಿಸಿ, ತಕ್ಷಣವೇ ಎಂಟು ಸದಸ್ಯರು 'ಕಟ್ಟಡ ನಿಧಿ'ಗೆ ದಾನಿಗಳಾಗಲು ಮುಂದಾದರು. ಅವರಿಗೆ ಕೃತಜ್ಞತೆಗಳು. ಮುಂದೆ ಈ ಜವಾಬ್ದಾರಿಯನ್ನು ನಿಮ್ಮ ಸಹಕಾರದಿಂದ ಸಂಘವು ಸಮರ್ಪಕವಾಗಿ ನಿರ್ವಹಿಸುತ್ತದೆ.

ಸಂಘದ ಕಾರ್ಯಕಾರಿ ಸಮಿತಿಗೆ ನೂತನವಾಗಿ ಚುನಾಯಿತರಾದ ಸದಸ್ಯರನ್ನು ಸಂಘವು ಸ್ವಾಗತಿಸುತ್ತದೆ. ತಮ್ಮ ಸ್ಥಾನವನ್ನು ತೆರವು ಮಾಡಿಕೊಟ್ಟ ಹಿಂದಿನ ಪದಾಧಿಕಾರಿಗಳ ಸೇವೆಗೆ ಕೃತಜ್ಞತೆಗಳು. ಸಂಘಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಸದಸ್ಯರಿಗೂ ಹಾಗೂ ಸಮಾನ್ಯ ಸದಸ್ಯತ್ವದಿಂದ ಪೋಷಕರಾದವರಿಗೂ ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಕುಮಾರ್ ರವರಿಗೂ ಸಂಘಕ್ಕೆ ಸತತವಾಗಿ ಛಾಯಾಚಿತ್ರಗಳನ್ನು ಒದಗಿಸುತ್ತಿರುವ ಶ್ರೀ ಎನ್. ಶಿವಕುಮಾರ್ ಅವರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡುತ್ತಿರುವ ತಮಗೆಲ್ಲಾ ಸಂಘದ ಪರವಾಗಿ ಕೃತಜ್ಞತೆಗಳು.



**ತಮ್ಮವ,**

■ **ಎಸ್. ಸೋಮಸುಂದರ**

## ಮೈ.ಮಂ.ದ್ರಾ.ಬ್ರ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

ಸಂಘದ ಬೈಲಾ (ಉಪವಿಧಿ) ನಿಬಂಧನೆಗಳ ಪ್ರಕಾರ 2015–2018ರ ಅವಧಿಗೆ ಅವಿರೋಧವಾಗಿ ಆಯ್ಕೆಯಾದ ಸದಸ್ಯರು


### ನೂತನ ಕಾರ್ಯಕಾರಿ ಸಮಿತಿ : 2015–2018

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 99809 45699** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ ಶ್ರೀಧರ್, 98801 7686** |
| | | **ಟಿ. ನಾಗೇಶ್, 99806 62118** |
| | | **ಎ.ವಿ. ಮಂಜುನಾಥ, 98441 08202** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮಾ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |



## ಸುಖ ಪ್ರಯಾಣಕ್ಕೆ ಶುಭಾಶಯಗಳು

ಸಂಘದ ಸ್ಥಾಪಕ ಸದಸ್ಯ, ಪೋಷಕ ಶ್ರೀ ಸಣ್ಣೆ ಸೂರಪ್ಪನವರ ಮೊಮ್ಮಗಳು ಹಾಗೂ ಸಂಘದ ಪೋಷಕ ಶ್ರೀ ಎಸ್. ಚಂದ್ರಶೇಖರ್, ಶ್ರೀಮತಿ ರಮಾದೇವಿಯವರ ಪುತ್ರಿ ಕುಮಾರಿ ಅಂಜಲಿಯವರು ಉನ್ನತ ವ್ಯಾಸಂಗಕ್ಕಾಗಿ ಅಮೆರಿಕದ ಓಹಿಯೋ ನಗರದ Cincinnati ವಿಶ್ವವಿದ್ಯಾನಿಲಯದಲ್ಲಿ ಏರೋಸ್ಪೇಸ್‌ನಲ್ಲಿ MS ಪದವಿ ಪಡೆಯಲು 28.7.2015ರಂದು ಪ್ರಯಾಣ ಕೈಗೊಂಡಿದ್ದಾರೆ. ಇವರಿಗೆ ಈ ಸಂದರ್ಭದಲ್ಲಿ ಸಂಘವು ಶುಭ ಹಾರೈಸುತ್ತದೆ. ಇದೇ ಸಂದರ್ಭದಲ್ಲಿ ಶ್ರೀ ಎಸ್. ಚಂದ್ರಶೇಖರ್ ರವರು ಸಂಘಕ್ಕೆ ದೇಣಿಗೆಯಾಗಿ 5,000/– ರೂಪಾಯಿಗಳನ್ನು ನೀಡಿರುವುದಕ್ಕೆ ಸಂಘವು ಧನ್ಯವಾದ ಅರ್ಪಿಸುತ್ತದೆ.



**ಅರ್ಪಣೆ**

## ರಾಜಾಪುರ ಶಿರಸ್ತೇದಾರ್ ಕೃಷ್ಣಮೂರ್ತಿ (ಚಿಕ್ಕಶ್ಯಾಮ)

ಶ್ರೀ ಕೃಷ್ಣಮೂರ್ತಿಗಳ ತಂದೆ ಶ್ರೀ ಅಕ್ಕಪ್ಪಯ್ಯ ಮತ್ತು ತಾಯಿ ಶ್ರೀಮತಿ ಸುಬ್ಬಮ್ಮನವರು. ಶ್ರೀಯುತರು 29.05.1901ರಲ್ಲಿ ಜನಿಸಿದರು.

ತಂದೆಯ ಅಕಾಲ ಮರಣದಿಂದಾಗಿ, ದೊಡ್ಡಪ್ಪ ಜಗದಾಪುರದ ಅನಂತಯ್ಯ ಹಾಗೂ ದೊಡ್ಡಮ್ಮ ಅಕ್ಕಣ್ಣಮ್ಮನವರ ನೆರಳಿನಲ್ಲಿ ಬೆಳೆದರು.

ಇಂಟರ್‌ಮೀಡಿಯೆಟ್ಟನ್ನು 1922ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ದಿಂದಲೂ, ಮೈಸೂರು ಸರ್ಕಾರದ 'ಲೋಕಲ್ ರೆವಿನ್ಯೂ ಸರ್ವೀಸ್' ಪರೀಕ್ಷೆಯಲ್ಲಿ 1928ರಲ್ಲಿ ತೇರ್ಗಡೆ ಹೊಂದಿ, ಆನೇಕಲ್ಲಿನ ವಿಶೇಷ ಶಿರಸ್ತೇದಾರರಾಗಿ ಉದ್ಯೋಗ ಪ್ರಾರಂಭಿಸಿದರು. ಮುಂದೆ ಬೆಂಗಳೂರು ಜಿಲ್ಲೆಯ ಯಲಹಂಕ, ಯಶವಂತಪುರ, ನೆಲಮಂಗಲ, ಹೊಸಕೋಟೆ ವಿಭಾಗಗಳಲ್ಲಿ ಸೇವೆ ಸಲ್ಲಿಸಿ ಬೆಂಗಳೂರಿನಲ್ಲೂ ಸರ್ಕಾರಿ ಸೇವೆಯನ್ನು ನಿರ್ವಹಿಸಿದರು. ಪೂಜ್ಯ ಡಿ.ವಿ.ಜಿಯವರ ಸಹೋದರಿ, ಶ್ರೀಮತಿ ಸಾವಿತ್ರಮ್ಮನವರನ್ನು 20.04.1920ರಂದು ವಿವಾಹವಾಗಿ 6 ಗಂಡು ಮಕ್ಕಳು ಹಾಗೂ 3 ಹೆಣ್ಣುಮಕ್ಕಳ ತುಂಬು ಸಂಸಾರವನ್ನು ನಡೆಸಿದ್ದಾರೆ.

ರಾಜ್ಯ ಸರ್ಕಾರದಿಂದ ಶ್ರೀ ಮೇಖ್ರಿ ಅವರು 1937ರಲ್ಲಿ ನಡೆದ ಮೇಖ್ರಿ ಸರ್ಕಲ್ ಉದ್ಘಾಟನಾ ಸಮಾರಂಭದಲ್ಲಿ ಸರ್ಕಾರದ ರೆವಿನ್ಯೂ ಖಾತೆಯ ಅಧಿಕಾರಿಯಾಗಿ ಇವರು ಭಾಗವಹಿಸಿದ್ದು ವಿಶೇಷ. 32 ವರ್ಷಗಳ ಸುದೀರ್ಘ ನಿಸ್ವಾರ್ಥ ಸೇವೆ ಸಲ್ಲಿಸಿ, ಸರ್ಕಾರದಿಂದ ಸ್ವಯಂ ನಿವೃತ್ತಿ ಹೊಂದಿದರು. ನಿವೃತ್ತಿಯ ನಂತರ, ಸಿಂಗಸಂದ್ರದ ಶ್ಯಾನುಭೋಗರಾಗಿದ್ದು, ಜೀವ ವಿಮಾ ಸಂಸ್ಥೆಯಲ್ಲೂ ಸಹ ಸೇವೆ ಸಲ್ಲಿಸಿದ್ದಾರೆ.

ಕಾಲೇಜು ದಿನಗಳಿಂದಲೂ ಹವ್ಯಾಸಿಯಾಗಿ ಫುಟ್‌ಬಾಲ್ ಆಟವನ್ನು ಆಡುವಲ್ಲಿ ಆಸಕ್ತಿ ಹೊಂದಿದ್ದರು. ತಮ್ಮ ದಿನಚರಿಯನ್ನು ನೆನಪಿನ ಮಜಲುಗಳಾಗಿ ಬರೆದಿಟ್ಟಿರುವುದು ವಿಶೇಷ.

ಬೃಹಚ್ಚರಣ ಸಂಘವು 10.02.1981ರಲ್ಲಿ ಇವರ ಸೇವೆಯನ್ನು ಶ್ಲಾಘಿಸಿ, ಅಭಿನಂದನಾ ಪತ್ರ ನೀಡಿ ಗೌರವಿಸಿದೆ. ತಂದೆ ಅಕ್ಕಪ್ಪಯ್ಯ ನವರ ಕಾಲದಿಂದಲೂ ಕಿತ್ತಗಾನಹಳ್ಳಿಯಲ್ಲಿ ನಡೆಯುವ ನಾಗಾರಾಧನೆಗೆ ಬರುವ ಭಕ್ತಾದಿಗಳಿಗೆ ಪ್ರಸಾದ ರೂಪವಾಗಿ ಪಾನಕ, ಕೋಸಂಬರಿ, ಅರವಟ್ಟಿಗೆ ಸೇವೆಯ ಪ್ರಾಯೋಜಕರಾಗಿದ್ದರು. ಇಂದಿಗೂ ಅವರ ಕುಟುಂಬದವರು ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಜನಾನುರಾಗಿಯಾಗಿದ್ದ ಶ್ರೀಯುತರು ಬಡವರಿಗೆ ದಾನ, ಧರ್ಮ ಮಾಡುವಲ್ಲಿ ಸಂತೋಷಪಡುತ್ತಿದ್ದರು. ತುಂಬು ಜೀವನ ನಡೆಸಿ 30.9.1981ರಲ್ಲಿ ನಮ್ಮನ್ನಗಲಿದರು.

ಸಂಘದ 2014–15ರ 'ಹಿರಿಯ ಚೇತನ' ಗೌರವಕ್ಕೆ ಪಾತ್ರರಾದ ಶ್ರೀ ಶಿವಪ್ರಸಾದ್‌ರವರು ಇವರ ಪುತ್ರರು. ಅವರ ತಂಗಿಯರಾದ ಶ್ರೀಮತಿ ಮೀನಾಕ್ಷಮ್ಮ, ಶ್ರೀಮತಿ ನಾಗಲಕ್ಷ್ಮಮ್ಮನವರು ನಮ್ಮೊಂದಿಗಿರುವುದು ಸಂತೋಷ.

–ಸಂ

# 2014-15ರ ಸರ್ವ ಸದಸ್ಯರ ಸಭೆಯ ಪಕ್ಷಿನೋಟ

ಮೈ. ಮಂ. ದ್ರಾ. ಬೃ. ಸಂಘದ 2014–15ರ ಸರ್ವ ಸದಸ್ಯರ ಸಭೆಯು ಭಾನುವಾರ 5.7.2015ರಂದು, ಬೆಂಗಳೂರಿನ ಬಸವನಗುಡಿ ಕುಕ್ಕೆ ಸುಬ್ರಹ್ಮಣ್ಯ ಮಠದ ಸಭಾಂಗಣದಲ್ಲಿ ಅಧ್ಯಕ್ಷ ಶ್ರೀ ಎಸ್. ಸೋಮಸುಂದರ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯು ಸದಸ್ಯ ಶ್ರೀ ವಾಸುರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ನಮ್ಮನ್ನಗಲಿದ ಮೂವತ್ತು ಚೇತನರುಗಳ ಹೆಸರುಗಳನ್ನು ಸದಸ್ಯ ಶ್ರೀ ಶಶಿಧರ್‌ರವರು ತಿಳಿಸಿದ ನಂತರ, ಸಭಿಕರು ಒಂದು ನಿಮಿಷ ನಿಂತು, ಗೌರವ ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರು ಪ್ರಾಸ್ತಾವಿಕ ನುಡಿಯಲ್ಲಿ ವಾರ್ಷಿಕ ವರದಿ, ಸಂಘದ ಬೆಳವಣಿಗೆ ಸ್ವಂತ ಕಟ್ಟಡ ಹೊಂದುವ ಯೋಜನೆ, ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು, ಹಣಕಾಸಿನ ವಹಿವಾಟು ಇವುಗಳನ್ನು ವಿವರಿಸಿದರು.

ಸಮುದಾಯದ ಸ್ಮರಣೀಯರಾದ ಶ್ರೀಯುತ ಡಿ.ವಿ.ಜಿ., ಡಾ. ದಾನಪ್ಪ, ಪಂಡಿತ್ ಶೇಷಾದ್ರಿ ಗವಾಯ್, ಪದ್ಮನಾಭಯ್ಯ, ಆರ್.ವಿ. ನಂಜುಂಡಯ್ಯ, ಬಿ.ಎಸ್. ಪದ್ಮನಾಭ್, ಆರ್. ಕೃಷ್ಣಮೂರ್ತಿ, ತಿಮ್ಮಪ್ಪಯ್ಯ, ಪಟ್ಟಾಭಿರಾಮಯ್ಯ, ಹೆಡ್ ಮಾಸ್ತರ್ ಶ್ರೀನಿವಾಸಯ್ಯ ಇವರಗಳು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿದರು.

ಸಂಘದ ವಾರ್ಷಿಕ ನಿರ್ವಹಣಾ ವೆಚ್ಚಕ್ಕಾಗಿ ಒಂದು ಸಾವಿರ ರೂ.ಗಳನ್ನು ನೀಡಬೇಕೆಂದು ವಿನಂತಿಸಿದರು.

ಸಂಘದ ಖಜಾಂಚಿ ಶ್ರೀ ಸತ್ಯನಾರಾಯಣರವರು ಲೆಕ್ಕ ಪತ್ರ ಪರಿಶೋಧಕರಿಂದ ದೃಢೀಕರಿಸಲ್ಪಟ್ಟ 2014–15ರ ಆಯವ್ಯಯ ಲೆಕ್ಕವನ್ನು ಸಭೆಯಲ್ಲಿ ಮಂಡಿಸಿದರು. ನಂತರ ಸದಸ್ಯರುಗಳು ಯಾವುದೇ ಚರ್ಚೆ ಇಲ್ಲದೆ ಸರ್ವಾನುಮತದಿಂದ ಆಯ–ವ್ಯಯ ಪತ್ರವನ್ನು ಅನುಮೋದಿಸಿದರು.

75 ವರ್ಷದ 18 ಹಿರಿಯರಿಗೆ ಸಂಘದಿಂದ ಶಾಲು, ಸ್ಮರಣ ಫಲಕ, ಅಭಿನಂದನಾ ಪತ್ರವನ್ನು ನೀಡಿ 'ಹಿರಿಯ ಚೇತನ'ರೆಂದು ಗೌರವಿಸಲಾಯಿತು.

ಪ್ರತಿಭಾವಂತ 24 ವಿದ್ಯಾರ್ಥಿಗಳಿಗೆ, ಅಗತ್ಯ ಪುಸ್ತಕ ಖರೀದಿಸಲು ಗಿಫ್ಟ್ ಕೂಪನ್, ಶ್ರೀ ಶ್ರೀನಿವಾಸ ದೇವರ ಸ್ಮರಣ ಫಲಕ, ಅಭಿನಂದನಾ ಪತ್ರ, ಜೊತೆಗೆ ದಿ. ಗೋಪಾಲರಾವ್‌ರವರ ನೆನಪಿನಲ್ಲಿ ಅವರ ಕುಟುಂಬದವರು ನೀಡಿದ ಪೆನ್‌ಡ್ರೈವ್ ನೀಡಿ ಪುರಸ್ಕರಿಸಲಾಯಿತು.

ಸಮುದಾಯದ ಹಿರಿಯರಾದ ಶ್ರೀ ಟಿ.ಎಲ್. ರಾಮಚಂದ್ರನ್, ಶ್ರೀಮತಿ ವಸಂತ ರಂಗನಾಥನ್, ಶ್ರೀ ಕೆ. ಆರ್. ಲಕ್ಷ್ಮೀನಾರಾಯಣ್, ಶ್ರೀ ಚಂದ್ರಮೌಳಿ, ಡಾ. ಸ್ವಾಮಿನಾಥ್, ಶ್ರೀ ಕೃಷ್ಣ ಶರ್ಮ, ಶ್ರೀಮತಿ ವಸಂತಕುಮಾರಿರವರು 'ಹಿರಿಯ ಚೇತನ'ರನ್ನು ಹಾಗೂ 'ಪ್ರತಿಭಾ ವಿದ್ಯಾರ್ಥಿ'ಗಳನ್ನು ಪುರಸ್ಕರಿಸಿದ್ದು ವಿಶೇಷ.

ಶ್ರೀಯುತರಾದ ಕೆ.ಬಿ. ಸುಬ್ರಹ್ಮಣ್ಯ ಶರ್ಮಾ, ಕೆ.ಎಸ್. ಅನಂತ್ ಹಾಗೂ ಬಿ. ಆರ್. ಶಂಕರ್ ಪ್ರಸಾದ್ ರವರು ಕಾರ್ಯಕಾರಿ ಸಮಿತಿಗೆ ನೂತನವಾಗಿ ಸೇರ್ಪಡೆಯಾದರು.

ಸಂಘದ ಪೋಷಕ ಸದಸ್ಯ ಶ್ರೀ ಕೆ. ಗುಂಡಪ್ಪನವರು ಮಾತನಾಡಿ, ಸಂಘಕ್ಕೆ ಸ್ವಂತ ಕಟ್ಟಡ ನಿಧಿಗಾಗಿ, ಪ್ರತ್ಯೇಕ ಬ್ಯಾಂಕ್ ಖಾತೆಯೊಂದನ್ನು ತೆರೆಯಬೇಕೆಂಬ ಸಲಹೆಯನ್ನು, ಪೋಷಕ ಸದಸ್ಯರಾದ ಬಿ.ಎಸ್. ಸೂರ್ಯನಾರಾಯಣರವರು ಅನುಮೋದಿಸಿದ್ದು ಸಂಘವು ಇದನ್ನು ಕಾರ್ಯರೂಪಕ್ಕೆ ತರಲಿದೆ.

ಸದಸ್ಯರಾದ ಶ್ರೀಯುತ ಶ್ರೀಕಂಠಶರ್ಮಾ, ಕೃಷ್ಣಶರ್ಮಾ, ಚಂದ್ರ ಮೌಳಿ, ಬೆಟ್ಟಕೋಟೆ ರಾಮಸ್ವಾಮಿ ಕುಟುಂಬದ ಸದಸ್ಯರು, ಬಿ.ವಿ. ಶೇಷಾದ್ರಿ, ಬಿ. ಜಯರಾಂ, ಬಿ.ಎನ್.ಜಿ. ಕುಮಾರ್ ಮುಂತಾದವರು 'ಕಟ್ಟಡ ನಿಧಿ'ಗೆ ದಾನಿಗಳಾಗುವುದಾಗಿ ವಾಗ್ದಾನ ನೀಡಿದರು.

ಸರ್ವ ಸದಸ್ಯರ ಸಭೆಯ ಕಾರ್ಯಕ್ರಮಕ್ಕೆ ಮಾಜಿ ಮೇಯರ್ ಶ್ರೀ ಕಟ್ಟೆ ಸತ್ಯನಾರಾಯಣರವರು ಆಗಮಿಸಿ ಸದಸ್ಯರಿಗೆ ಶುಭ ಹಾರೈಸಿದರು.

ಸಭೆಯ ಕಾರ್ಯಕ್ರಮದ ನಿರೂಪಣೆಯನ್ನು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತಿ ನಟರಾಜ್‌ರವರು ನಿರೂಪಿಸಿದ್ದು, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಟಿ.ಎಸ್. ರಮೇಶ್‌ರವರ ಸ್ವಾಗತ ಭಾಷಣ, ಬಿ. ಸುಬ್ರಹ್ಮಣ್ಯಂರವರು ಹಿರಿಯ ಚೇತನರ ಹಾಗೂ ಪ್ರತಿಭಾ ವಿದ್ಯಾರ್ಥಿಗಳ ವಿವರಗಳನ್ನು ನೀಡಿದರು. ಸಂಘದ ಸಹ ಕಾರ್ಯದರ್ಶಿ ಶ್ರೀ ಅರುಣ್ ವೆಂಕಟಾಚಲಯ್ಯರವರ ವಂದನಾರ್ಪಣೆ ನಂತರ ಭೋಜನದೊಂದಿಗೆ ಸಭೆಯು ಮುಕ್ತಾಯವಾಯಿತು. ●



# ಸಂಘದ 'ಹಿರಿಯ ಚೇತನ'ರಿಗೆ 2014–15ರ ಗೌರವ ಸಮರ್ಪಣೆ











ಸಂಘದಿಂದ ಗೌರವಿಸಲ್ಪಟ್ಟ ಶ್ರೀಯುತರಾದ ಜಿ. ವಿ. ಸುಬ್ಬಣ್ಣ, ಎಸ್. ಚಂಪಕಧಾಮ, ಆರ್.ಎಸ್. ಭಗವಾನ್, ಬಿ.ಎಸ್. ರಾಧಾಕೃಷ್ಣ, ಆರ್.ಕೆ. ಶಿವಪ್ರಸಾದ್, ಬಿ.ಎ. ಲಕ್ಷ್ಮಣ ಶರ್ಮ, ನಾಗರತ್ನಮ್ಮ, ಜಿ.ಪಿ. ಲಕ್ಷ್ಮೀದೇವಿ, ಪಾರ್ವತಿ ರಾಧಾಕೃಷ್ಣ, ಶಾಂತಾ ಲಕ್ಷ್ಮೀನಾರಾಯಣ, ಸುವರ್ಣ ಪದ್ಮನಾಭ್



## ಸದಸ್ಯರಿಗಾಗಿ ಕಾರ್ಯಾಗಾರ

ಸರ್ವ ಸದಸ್ಯರ ಸಭೆಯಲ್ಲಿ ಗ್ಯಾಸ್ ಸ್ಟವ್ ಮತ್ತು ಸಿಲಿಂಡರ್‌ನಿಂದ ಆಗುವ ಅನಾಹುತವನ್ನು ತಪ್ಪಿಸಲು ಶ್ರೀ ಸುದರ್ಶನ್ ಮತ್ತು ತಂಡ ನಮ್ಮ ಸದಸ್ಯ ಕುಟುಂಬದವರಿಗೆ ಸುರಕ್ಷತಾ ಮಾಹಿತಿಗಾಗಿ ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಹೆಚ್ಚಿನ ವಿವರಗಳಿಗೆ
**ಆರ್.ಎಂ. ಪ್ರಕಾಶರಾವ್**
**9449619276**

# 2014–15ರ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು













**10ನೇ ತರಗತಿ**

1. ಅಕ್ಷಯ ಅತ್ರೇಯ, 2. ಭಾಗರ್ವ, 3. ಬೃಂದ. ಪಿ., 4. ಮಾನಸ. ಬಿ. ನಾರಾಯಣ, 5. ನಂದನ ಶ್ರೀನಿವಾಸ, 6. ಪ್ರಾಜ್ಞಮೋಹನ್, 7. ಪ್ರಜ್ವಲ, 8. ಸಂಜನ ಶೈಲೇಶ, 9. ಶಾಶ್ವತಿ. ಆರ್.ಯು., 10. ಶ್ರೀ ಲಕ್ಷ್ಮೀ, 11. ಸುಕೃತ. ಎಂ.ಎಸ್. 12. ವಿಜಯ ಕಲ್ಯಾಣರಾಮನ್, 13. ಯಶಸ್ವಿನಿ,

**ಸಂಘದ 'ವಿದ್ಯಾನಿಧಿ', 'ಅನ್ನದಾನನಿಧಿ' ಹಾಗೂ 'ಕಟ್ಟಡನಿಧಿ'ಗೆ ಉದಾರವಾಗಿ ದೇಣಿಗೆ ನೀಡಲು ಸಂಘವು ಕೋರುತ್ತದೆ.**

**ದ್ವಿತೀಯ ಪಿಯುಸಿ**

1. ಅಖಿಲ ಪ್ರಸಾದ್, 2. ಅಶ್ವಿನಿ ವೆಂಕಟೇಶ, 3. ದಿವ್ಯಂದು ಕಶ್ಯಪ, 4. ಗೌತಮ. ಎನ್., 5. ರಾಹುಲ್ ಶ್ರೀನಿವಾಸ, 6. ಸಂಜಯ್. ಕೆ., 7. ಶಂಕರ. ವಿ,

| | | |
|---|---|---|
| ವಿನಯ್ ಕುಮಾರ್. ಆರ್. | – | ಬಿ. ಕಾಂ |
| ಸಮರ್ಥ | – | ಬಿ. ಕಾಂ |
| ಗಾಯತ್ರಿ | – | ಎಂ.ಎಸ್ಸಿ., |
| ಶ್ರುತಿ. ಟಿ.ಆರ್. | – | ಎಂ.ಬಿ.ಎ. |

# 2014-15ರ ಸರ್ವ ಸದಸ್ಯರ ಸಭೆಯ ದೃಶ್ಯಾವಳಿ



ಅಧ್ಯಕ್ಷರ ಭಾಷಣ


ಸದಸ್ಯರ ಅನಿಸಿಕೆಗಳು


ಆಯ–ವ್ಯಯ ಮಂಡನೆ–ಅನುಮೋದನೆ


ಪ್ರಾಸ್ತಾವಿಕ ಭಾಷಣ– ಶ್ರೀ ವಿ.ಎಸ್. ಮಣಿ


ಸದಸ್ಯರು–ಸಭಿಕರು





# ಪೂಜಾವಿಧಾನ

ಸನಾತನ ಧರ್ಮದಲ್ಲಿ ದೇವತಾರಾಧನೆಯನ್ನು ಪೂಜೆಯ ಮೂಲಕ ನಡೆಸುವುದು ರೂಢಿಯಲ್ಲಿದೆ. 'ಪೂಜಾ' ಎಂದರೆ ಪೂರ್ಣ ದಿಂದ ಜನ್ಯವಾದದ್ದು. ಸಕಲ ಚರಾಚರ ವಸ್ತುಗಳೂ ಪೂರ್ಣವಾದ ಭಗವಂತನಿಂದಲೇ ಜನ್ಯವಾಗಿರುವುದು. ಪೂಜೆ, ವ್ರತಗಳನ್ನೊಳಗೊಂಡ ಸಕಲ ಕರ್ಮಗಳೂ ಚಿತ್ತಶುದ್ಧಿಗಾಗೇ ಇರುವುದು. ಆದಿಗುರುಗಳಾದ ಶ್ರೀಶಂಕರ ಭಗವತ್ಪಾದರು ತಮ್ಮ 'ವಿವೇಕ ಚೂಡಾಮಣಿ' ಎಂಬ ಪ್ರಕರಣ ಗ್ರಂಥದಲ್ಲಿ 'ಚಿತ್ತಸ್ಯ ಶುದ್ಧಯೇ ಕರ್ಮ ನ ತು ವಸ್ತೂಪಲಬ್ಧಯೇ' ಎಂದು ಹೇಳಿದ್ದಾರೆ.

ಇಂದಿನ ದಿನಗಳಲ್ಲೂ ಪ್ರತೀ ಮನೆಗಳಲ್ಲಿ ದಿನನಿತ್ಯ ಪೂಜೆ, ವರ್ಷಾವಧಿ ವ್ರತಗಳು ಮಾಡುತ್ತಿದ್ದೇವೆ. ಇದರ ಅರ್ಥವನ್ನು ತಿಳಿದು ಮಾಡಿದಾಗ, ಮಾಡಿದ ಕರ್ಮವು ಸಾರ್ಥಕವಾಗುತ್ತದೆ. ನದಿಗಳು ಎಲ್ಲೇ ಹುಟ್ಟಿ, ಹೇಗೆ ಹರಿದರೂ ಸಮುದ್ರವನ್ನೇ ಸೇರುವಂತೆ, ಯಾವುದೇ ದೇವತೆಗೆ ಪೂಜಿಸಿದರೂ, ಅದು ಪರಬ್ರಹ್ಮನಿಗೆ ಸೇರುವುದು. 'ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ' ಪೂಜೆ, ವ್ರತಗಳನ್ನು ನಿಷ್ಠೆಯಿಂದ ಮಾಡಬೇಕು ಮತ್ತು ಸಾಂಗವಾಗಿ ನೆರವೇರಿಸಲು ಪೂರ್ವ ಸಿದ್ಧತೆ ಮುಖ್ಯವಾದದು. ಸಮಾಧಾನದಿಂದ ಪೂಜಿಸುವುದು ಅದಕ್ಕಿಂತ ಮುಖ್ಯ.

ಪೂಜೆಯಲ್ಲಿ ಮಾಡುವ ಷೋಡಶೋಪಚಾರಕ್ಕೆ ಬಳಸುವ ಸಕಲ ಸಾಮಗ್ರಿಗಳೂ ಪ್ರಕೃತಿಯಿಂದಲೇ ಬಂದಿರುವುದು. ಇದರತ್ತ ಸ್ವಲ್ಪ ಗಮನಿಸೋಣ. ಪೂಜಾವಿಗ್ರಹ, ದೇವರ ಪಟ ಸಾಲಿಗ್ರಾಮ ಇವುಗಳು ಮಣ್ಣು, ಲೋಹ, ಗಾಜು, ಕಲ್ಲು, ಕಾಗದದ ಚಿತ್ರ, ಪ್ರಕೃತಿಯಿಂದ ದೊರೆಯುವುದು. ಅರಿಶಿನ, ಕುಂಕುಮ, ಹೂ, ಹಣ್ಣು, ತೆಂಗಿನಕಾಯಿ, ಊದಿನಕಡ್ಡಿಗೆ ಬಳಸುವ ಶ್ರೀಗಂಧ, ಕರ್ಪೂರ, ಮಾವಿನಎಲೆ, ಬಾಳೆಕಂದು, ರಂಗೋಲಿ ಪುಡಿ, ಪಂಚಾಮೃತಕ್ಕೆ ಬಳಸುವ ಹಾಲು, ಮೊಸರು, ತುಪ್ಪ, ಸಕ್ಕರೆ, ಜೇನು, ಎಳನೀರು, ದೀಪದ ಎಣ್ಣೆ, ಗೆಜ್ಜೆವಸ್ತ್ರ, ಬತ್ತಿಗೆ ಬಳಸುವ ಹತ್ತಿ, ನೀರು, ವಸ್ತ್ರ ಅಗ್ನಿ ಎಲ್ಲವೂ ಪ್ರಕೃತಿಯಿಂದಲೇ ದೊರೆಯುವುದು (ಯಾವುದಾದರೂ ಸಾಮಗ್ರಿ ಮರೆತಿದ್ದರೆ ಅವುಗಳನ್ನು ನೀವೇ ಗುರುತಿಸಿದಾಗ ಅವುಗಳೂ ಪ್ರಕೃತಿದತ್ತವೇ ಆಗಿರುತ್ತದೆ.) ಭೂಮಿ, ನೀರು, ಅಗ್ನಿ, ವಾಯು ಮತ್ತು ಆಕಾಶ ಎಂಬ ಪಂಚಭೂತದಿಂದಲೇ ಪ್ರಪಂಚ, ಮಾನವಶರೀರ, ಪ್ರಕೃತಿ ಆಗಿರುವುದು.

ಪರಬ್ರಹ್ಮನ ಮಾಯಾಶಕ್ತಿಯಾದ ಪ್ರಕೃತಿಯಿಂದ ಬಂದಿದ್ದನ್ನು ಪರಬ್ರಹ್ಮನಿಗೇ ಸಮರ್ಪಿಸುವುದು. ಇದು ಸುಗುಣೋಪಾಸನೆಯ ವಿಧಾನ. ಪೂಜಾವಿಧಾನದ ಅಂತರಾರ್ಥವನ್ನು ಹೀಗೆ ಗಮನಿಸೋಣ.

ಒಬ್ಬ ಅತಿಥಿ ಮನೆಗೆ ಬಂದರೆ, ಯಾವ ರೀತಿ ಉಪಚಾರ ಮತ್ತು ಆದರ ಮಾಡುತ್ತೇವೆಯೋ, ಅದೇ ರೀತಿ ಭಗವಂತನನ್ನು ಪೂಜಿಸುವುದು. ಅತಿಥಿ ಎಂದರೆ ದಿನ, ತಿಥಿ ನೋಡದೆ ಬರುವವನು. ಆ ರೀತಿ ಬರುವವನನ್ನು ನಾವು ಯಾವುದೇ ಬಯಕೆ ಇಲ್ಲದೆ, ಫಲ ಅಪೇಕ್ಷಿಸದೆ, ಪೂರ್ವಾಗ್ರಹ ಪೀಡನೆ ಇಲ್ಲದೆ ಸ್ವಾಗತಿಸಬೇಕು. ಒಂದೇ ಮನಸ್ಸಿನಿಂದ ಅಂತಃಕರಣದಲ್ಲಿ ರಾಗ, ದ್ವೇಷ ಇಲ್ಲದೆ ಆನಂದದಿಂದ ಬರಮಾಡಿಕೊಂಡು ಕುಳಿತುಕೊಳ್ಳಲು



ಸೂಕ್ತಸ್ಥಳವನ್ನು ಏರ್ಪಡಿಸ ಬೇಕು. (ಸುಖಾಸೀನ, ಪೀಠ ಪೂಜೆ) ನಂತರ ಕೈ, ಕಾಲು ತೊಳೆಯಲು ನೀರು ಕೊಡಬೇಕು. (ಅರ್ಘ್ಯ, ಪಾದ್ಯ) ಬಂದ ಅತಿಥಿಗೆ ಸ್ನಾನಕ್ಕೆ ಅನುಕೂಲವಾಗುವಂತೆ ವಿಧ ವಿಧವಾದ ಸ್ನಾನ ಸಾಮಗ್ರಿ ಕೊಡುವುದು. (ಪಂಚಾಮೃತ ಅಭಿಷೇಕ) ಅದರ ತರುವಾಯ ಉಡಲು ಉತ್ತಮ ವಸ್ತ್ರ ನೀಡಬೇಕು. (ಗೆಜ್ಜೆ, ವಸ್ತ್ರ, ಯಜ್ಞೋಪವೀತ) ಸುಗಂಧ ದ್ರವ್ಯಗಳನ್ನು ಲೇಪಿಸುವಂತೆ ಗಂಧ ಕೊಡುವುದು. ಅಲಂಕಾರಿಕವಾಗಿ ಮಂಗಳದ್ರವ್ಯ, ಹೂ ತೊಡಿಸುವುದು. ಆಮೇಲೆ ಸುಗಂಧಯುಕ್ತ, ಆಹ್ಲಾದ ಪರಿಸರದಲ್ಲಿ ಶುಚಿ, ರುಚಿಯಾದ ಆಹಾರವನ್ನು ತಯಾರಿಸಿ ನೀಡಬೇಕು. (ಧೂಪ, ದೀಪ, ನೈವೇದ್ಯ) ಮಧ್ಯೆ ಮಧ್ಯೆ ಕುಡಿಯಲು ಪಾನೀಯ, ನೀರು ಕೊಡುವುದು. ಅತಿಥಿಗೆ ಬೇಕಾದ ಸಕಲವನ್ನೂ ನೀಡಿ ಲೋಪ ಇಲ್ಲದೆ ಸತ್ಕಾರ ಮಾಡುವುದು. (ಮಹಾ ಮಂಗಳಾರತಿ) ಕಡೆಯಲ್ಲಿ ಮನರಂಜನೆಯಾಗಿ ಗಾಯನ, ನರ್ತನ, ವಾದ್ಯನಾದ ಇನ್ನೂ ಮುಂತಾದವುಗಳನ್ನು ಮಾಡುವುದು. (ಪುನಃಪೂಜೆ) ಬಂದ ಅತಿಥಿಯನ್ನು ತೃಪ್ತಿಯಾಗಿ ಬೀಳ್ಕೊಟ್ಟ ಮೇಲೆ ಉಪಚರಿಸಿದ ನಾವೂ ಆತನಿಗೆ ಸಮರ್ಪಿಸಿದ್ದನ್ನು ತೀರ್ಥ, ಪ್ರಸಾದ ರೂಪವಾಗಿ ಕುಟುಂಬದವರೊಡನೆ ಸಂತೋಷದಿಂದ ಸ್ವೀಕರಿಸುವುದು.

ಭಗವಂತನನ್ನೇ ಅತಿಥಿ ಎಂದು ಸಂಕಲ್ಪಿಸಿ, ಭಾವಿಸಿ ಪೂಜೋಪಚಾರ ನೆರವೇರಿಸುವುದು ಇಲ್ಲಿನ ಇಂಗಿತ.

■ ಲಲಿತಾ ರಮೇಶ್
080-23404860



# ನಾ ಕಂಡ ಡಿ.ವಿ.ಜಿ.

ಡಿ.ವಿ.ಜಿ. ಅಂದರೆ ಪ್ರತಿಯೊಬ್ಬ ಕನ್ನಡಿಗನಿಗೂ ಪರಿಚಯವಾದ ವ್ಯಕ್ತಿ. ಅವರ ಪೂರಾ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ. ಹೆಸರಿಗೆ ತಕ್ಕಂತೆ ದೃಢಕಾಯ ದೇಹ. ಸ್ಕೂಲಿನ ವಿದ್ಯಾಭ್ಯಾಸ ಮುಗಿಸಿ, ಮುಂದೆ ಓದನ್ನು ಮುಂದುವರೆಸಲಾಗದೆ, ಅಲ್ಲಿ ಇಲ್ಲಿ ಉದ್ಯೋಗವನ್ನು ಮಾಡಿದರು. ಯಾವುದೂ ಸ್ಥಿರವಿರಲಿಲ್ಲ. ಕೊನೆಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಲೇಖನಗಳನ್ನು ಬರೆದು, ಪತ್ರಿಕೆಗಳಿಗೆ ಕಳುಹಿಸಲು ಪ್ರಾರಂಭಿಸಿದರು. 'ಇದನ್ನೇ ವೃತ್ತಿಯಾಗಿ, ಯಾಕೆ ಮಾಡಬಾರದು' ಎಂದು ಬರಹದಿಂದಲೇ ಬದುಕು ಸಾಗಿಸುವ ಯೋಚನೆ. ಇದರ ಜೊತೆಗೆ, ಬಿಡಿ ಕವನಗಳನ್ನೂ ಬರೆಯಲು ಪ್ರಾರಂಭಿಸಿದರು. ಇಂಗ್ಲಿಷ್ ಪತ್ರಿಕೆಗಳಾದ 'ದಿ ಹಿಂದೂ', 'ಈವನಿಂಗ್ ಮೈಲ್', 'ಇಂಡಿಯನ್ ಪೇಟ್ರಿಯಾಟಿಕ್'ಗಳಲ್ಲಿ ಮತ್ತು ಕನ್ನಡ ಪತ್ರಿಕೆಗಳಾದ 'ಭಾರತಿ', 'ವೀರಕೇಸರಿ', 'ತಾಯಿನಾಡು'ಗಳಲ್ಲಿ ಡಿವಿಜಿಯವರು ತಮ್ಮ ಲೇಖನಗಳನ್ನು ಬರೆಯುತ್ತಿದ್ದರು. ಎಲ್ಲಾ ಅವರ ಬರವಣಿಗೆಗಳೂ ಉಪಯುಕ್ತ ಮತ್ತು ಜನಪ್ರಿಯತೆಯನ್ನು ಹೊಂದಿದ್ದವು. ಸರಳತೆಯ ಜೀವನವನ್ನು ಹೊಂದಿದ್ದ ಡಿ.ವಿ.ಜಿ.ಯವರು 17ನೇ ವಯಸ್ಸಿನಲ್ಲೇ ಮದುವೆ ಮಾಡಿಕೊಂಡರು. ಹೊಸ ಜವಾಬ್ದಾರಿ ಹೊಂದಿದ ಗುಂಡಪ್ಪ ನವರಿಗೆ ಸಂಸಾರ ನಡೆಸುವುದೇ ಸಮಸ್ಯೆಯಾಗಿತ್ತು. ಅಂತೂ ಜೀವನಕ್ಕೆ ಬರವಣಿಗೆಯಿಂದ ಪ್ರತಿ ಲೇಖನಕ್ಕೆ ರೂ. 10–15 ಬರುತ್ತಿತ್ತಂತೆ.

ಕಾಲವು ಉರುಳಿದಂತೆ ಡಿ.ವಿ.ಜಿ.ಯವರ ಪ್ರತಿಭೆಯನ್ನು ಮೆಚ್ಚಿ 1927ರಲ್ಲಿ (ಅವರ 40ನೇ ವಯಸ್ಸಿನಲ್ಲಿ) ಮೈಸೂರು ವಿಶ್ವವಿದ್ಯಾಲಯದ ಸೆನೆಟ್, ಅವರನ್ನು ಸದಸ್ಯರಾಗಿ ಆಯ್ಕೆ ಮಾಡಿದರು. ಆ ಸಮಯಕ್ಕೆ, ಅವರು ಬಿಡಿ ಕವನಗಳನ್ನು ಸೇರಿಸಿ 'ವಸಂತ ಕುಸುಮಾಂಜಲಿ' ಪುಸ್ತಕವನ್ನು ಪ್ರಕಟಿಸಿದ್ದರು. ಅಲ್ಲಿಂದ ಆರಂಭವಾದ ಸಾಹಿತ್ಯ ರಚನೆ ಮತ್ತು ಪ್ರಕಟಣೆ, ಅವರ ಜೀವನದುದ್ದಕ್ಕೂ ನಡೆದುಬಂತು. ಎರಡನೇ ಕೃತಿ 'ವನಸುಮ' ಈ ಎರಡು ಕೃತಿಗಳಲ್ಲೂ ತಾಳೆ ಹೂವು ಮತ್ತು ಮಲ್ಲಿಗೆ ಹೂಗಳ ಪರಿಮಳವನ್ನು ವಿವರಿಸಿ, ತಮ್ಮ ಸಾಹಿತ್ಯ ಪಾಂಡಿತ್ಯವನ್ನು ಹೊರತಂದಿದ್ದಾರೆ. 1928ರಲ್ಲಿ ಬಾಗಲಕೋಟೆಯಲ್ಲಿ ನಡೆದ ಮೊದಲ ಪತ್ರಕರ್ತರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಇದಾದಮೇಲೆ ಮಡಿಕೇರಿಯಲ್ಲಿ 1932ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಡಿ.ವಿ.ಜಿಯವರು ವಹಿಸಿದ್ದರು.

ಇವರ ನಿಸ್ಪೃಹತೆ ಮತ್ತು ನ್ಯಾಯ ರೀತಿ ಜೀವನ, ಪ್ರತಿಯೊಬ್ಬರಿಗೂ ಆಶ್ಚರ್ಯವನ್ನು ಉಂಟುಮಾಡುವ ಸಂಗತಿ. 1913–14ರಿಂದ ಪ್ರಾರಂಭವಾದ ಪ್ರಜಾಪ್ರತಿನಿಧಿ ಸಭಾ ವರದಿಗಳನ್ನು ಬರೆಯಲು ಡಿ.ವಿ.ಜಿ. ಯವರಿಗೆ ಅವಕಾಶ ಸಿಕ್ಕಿ ರಾಜ್ಯದ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾ ಇಸ್ಮಾಯಿಲ್ ಅವರುಗಳಿಗೆ ಸಲಹೆಗಾರರಾಗಿದ್ದರೂ, ಅವರುಗಳು ಕೊಡುತ್ತಿದ್ದ ಸಂಭಾವನೆ ಹಣವನ್ನು ಸ್ವೀಕರಿಸುತ್ತಿರಲಿಲ್ಲವೆಂದರೆ, ಅದು ಆಶ್ಚರ್ಯವಲ್ಲವೇ?

ಡಿ.ವಿ.ಜಿಯವರ ಮಹಾನ್ ಹಾಗೂ ಜನಪ್ರಿಯ ಕೃತಿ 'ಮಂಕುತಿಮ್ಮನ ಕಗ್ಗ' 1943ರಲ್ಲಿ ಪ್ರಕಟಗೊಂಡಿತು. ನಾಲ್ಕೇ ಸಾಲಿನ 945 ಪದ್ಯಗಳಲ್ಲಿ ಸಮೃದ್ಧ ವಿಷಯ ಒಳಗೊಂಡಿದೆ. 'ಕಗ್ಗ ಕನ್ನಡದ ಭಗವದ್ಗೀತೆ' ಜೀವ ಮತ್ತು ಜಗತ್ತಿನ ಮೇಲೆ ವ್ಯಾಖ್ಯಾನ ಮತ್ತು ಆಧ್ಯಾತ್ಮಿಕ ಚಿಂತನೆಯಿದೆ. ಈ ಕೆಳಗೆ ನಾನು ಆರಿಸಿಕೊಂಡಿರುವ ವಿಚಾರ ಸಂಕಿರಣ ಸಾಲುಗಳು ಬಹಳ ಸ್ವಾರಸ್ಯ ಮತ್ತು ಅಮೂಲ್ಯವಾಗಿದೆ.


1) ಸಹನೆಯೇ ಶ್ರೀರಕ್ಷೆ, 2) ಸ್ವಾನುಭವ ರಸಪಾಕ, 3) ಬದುಕು ಜಟಕಾಬಂಡಿ, ವಿಧಿ ಅದರ ಸಾಹೇಬ, 4) ಹರಿಚಿತ್ತ ಸತ್ಯ, ನರ ಚಿತ್ತ ಸಂದೇಹ, ಸ್ಥಿರ ಚಿತ್ತ ನಿನ್ನಲಿರಲಿ, 5) ಜಾತಸ್ಯ ಮರಣಂ ಧ್ರುವಂ, ಮೃತ್ಯಸ್ಯ ಧರ್ಮಂ ಧ್ರುವಂ॥

ಡಿವಿಜಿಯವರು ಕವನ–ಕಾವ್ಯಗಳಲ್ಲದೆ, ನಾಟಕ, ಮಕ್ಕಳಿಗೆ ಉಪಯುಕ್ತ ಸಾಹಿತ್ಯ, ಆಧ್ಯಾತ್ಮಿಕ ವಿಷಯ ಸಂಗ್ರಹಗಳು, ಜೀವನ ಚರಿತ್ರೆಗಳು, ವಿಚಾರ ಸಾಹಿತ್ಯ ಮುಂತಾದವುಗಳನ್ನು ಬರೆದಿದ್ದಾರೆ. ಬರವಣಿಗೆಗಳ ಜೊತೆಗೆ ಬೆಂಗಳೂರಿನಲ್ಲಿ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ', 'ಪಾಪ್ಯುಲರ್ ಎಜುಕೇಷನ್ ಲೀಗ್' ಮತ್ತು ಅನೇಕ ಪಕ್ಷಾತೀತವಾದ ಸಂಸ್ಥೆಗಳನ್ನು ಸ್ಥಾಪಿಸಿದರು.

ಇನ್ನೊಂದು ಸೋಜಿಗವೆಂದರೆ ಡಿವಿಜಿಯವರು ಆಗಿನ ಕಾಲದ ಮೆಟ್ರಿಕ್ ಪರೀಕ್ಷೆಯನ್ನು ಮುಗಿಸದಿದ್ದರೂ 1961ರಲ್ಲಿ ಮೈಸೂರು ವಿಶ್ವ ವಿದ್ಯಾಲಯದವರು, ಗೌರವ ಡಿ.ಲಿಟ್ ಪದವಿಯನ್ನು ಅವರಿಗೆ ಕೊಟ್ಟು ಸನ್ಮಾನ ಮಾಡಿದರು. ಇದಲ್ಲದೆ ಭಾರತ ಸರ್ಕಾರವು 1974ರಲ್ಲಿ 'ಪದ್ಮ ವಿಭೂಷಣ' ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದರು.

ಡಿವಿಜಿಯವರು ನಮ್ಮ ತಂದೆಗೆ ಹತ್ತಿರ ಸಂಬಂಧಿಕರಾಗಿದ್ದರಿಂದ ಮತ್ತು ನನ್ನ ಚಿಕ್ಕಪ್ಪನವರ ಮಗ, ಅವರ ಮಗಳನ್ನು ಮದುವೆಯಾಗಿ ದ್ದರಿಂದ ನಾನು ಆಗಾಗ್ಗೆ ಅವರನ್ನು ಕಾಣುತ್ತಿದ್ದೆ. ಅವರು ನನಗೆ ಬುದ್ಧಿವಾದವನ್ನು ಹೇಳುವುದಲ್ಲದೆ ವಿದ್ಯೆಯ ಗಳಿಕೆಯಿಂದ ಆಗುವ ಪ್ರಯೋಜನವನ್ನು ಒತ್ತಿ ಹೇಳುತ್ತಿದ್ದರು.

ಕನ್ನಡ ಭಾಷೆಯ ಉದ್ಧಾರಕ್ಕೆ ಮತ್ತು ಕನ್ನಡ ಸಾಹಿತ್ಯ ಅಭಿವೃದ್ಧಿಗೆ ಶ್ರಮಿಸಿದ ಡಿ.ವಿ. ಗುಂಡಪ್ಪನವರು ಅಪರೂಪದ ವ್ಯಕ್ತಿಯಾಗಿ, ನ್ಯಾಯ ಮತ್ತು ಧರ್ಮವನ್ನು ಪಾಲಿಸಿಕೊಂಡು 1978ರಲ್ಲಿ ಕಣ್ಮರೆಯಾದರು. ಡಿ.ವಿ.ಜಿ. ಯವರು ಈಗ ಇಲ್ಲದಿದ್ದರೂ ಅವರು ಬರೆದಿರುವ ಕವನ–ಕಾವ್ಯ ಕೃತಿಗಳು, ಆಧ್ಯಾತ್ಮಿಕ ವಿಮರ್ಶೆಗಳು, ಶಾಶ್ವತವಾಗಿ ಕನ್ನಡ ಭಾಷೆಗೇ ಭೂಷಣವಾಗಿ ಬೆಳಗುತ್ತಿರುತ್ತವೆ.



■ ಎಂ.ಪಿ. ರಂಗನಾಥನ್
94808 61849

ಹಿಂದಿನ ಸಂಚಿಕೆಯಿಂದ

## ಆ ಪರಬ್ರಹ್ಮನನ್ನು ಕುರಿತು ಉಪನಿಷತ್ತು ಹೇಳಿದಂಥ ಉಕ್ತಿಗಳು



ಏಕೋದೇವಃ ಸರ್ವ ಭೂತೇಷು ಗೂಢಃ
ಸರ್ವವ್ಯಾಪೀ ಸರ್ವ ಭೂತಾಂತರಾತ್ಮ
ಕರ್ಮಾಧ್ಯಕ್ಷಃ ಸರ್ವ ಭೂತಾದಿವಾಸಃ
ಸಾಕ್ಷೀ ಚೇತಾ ಕೇವಲ ನಿರ್ಗುಣಶ್ಚ ॥

ದೇವರು ಒಬ್ಬನೇ ಎಲ್ಲಾ ವಸ್ತುಗಳಲ್ಲಿಯೂ ಗೂಢವಾಗಿ ಅಡಗಿದ್ದಾನೆ. ರಹಸ್ಯವಾಗಿದ್ದರೂ ಎಲ್ಲೆಲ್ಲೂ ವ್ಯಾಪಿಸಿದ್ದಾನೆ. ಎಲ್ಲಾ ಪ್ರಾಣಿಗಳ ಒಳಗಡೆ ಆತ್ಮರೂಪವಾಗಿದ್ದಾನೆ. ಮನುಷ್ಯ ಮಾಡುವ ಮಾಡದಿರುವ ಎಲ್ಲಾ ಕೆಲಸಗಳ ಮೇಲ್ವಿಚಾರಣೆ ಮಾಡುತ್ತಾನೆ. ಎಲ್ಲಾ ಪ್ರಾಣಿಗಳಿಗೂ ಎಲ್ಲಕ್ಕೂ ಅಧಿಕಾರಿಯಾಗಿರುವ ಚೈತನ್ಯ ತಾನು ಜಗತ್ತಿನ ಭಾಗವಾಗಿರದೆ ಜಗತ್ತನ್ನು ಸಾಕ್ಷಿಯಂತೆ ತಟಸ್ಥನಾಗಿ ನೋಡುತ್ತಿರುವ ಚೈತನ್ಯ ಸ್ವಯಂಜಾತನಾಗಿ ತ್ರಿಗುಣ ರಹಿತನಾಗಿದ್ದಾನೆ. ಹೀಗೆ ಭಗವದ್ವಸ್ತು ಎಂಬುದು ಮಹರ್ಷಿಗಳಿಗೆ ಅನುಭವಿಗಳಿಗೆ ಪ್ರತ್ಯಕ್ಷವಾಗಿರುತ್ತದೆ. ಅಂತಹ ಅನುಭಾವ ನಿಮಗೆ ನಿಶ್ಚಯವಾಗಿದ್ದಲ್ಲಿ ಆ ತತ್ತ್ವಕ್ಕೆ ಶರಣಾಗು ಎಂದಿದ್ದಾರೆ ಕವಿಗಳು.

–ಜೆ.ಪಿ. ಲಕ್ಷ್ಮೀದೇವಿ

....ಒಂದು ಸ್ಮರಣೀಯ ನೆನಪು

## ದಾರ್ಶನಿಕ ಡಿವಿಜಿಗೆ ಕವಿ ಕುವೆಂಪುರಿಂದ ಪತ್ರ

ಶ್ರೀಮಾನ್ ಡಿ.ವಿ. ಗುಂಡಪ್ಪನವರಿಗೆ,

ಅಳುಕಿ, ಅಳುಕಿ ತಮಗೆ ಈ ಕಾಗದ ಬರೆಯುತ್ತಿದ್ದೇನೆ. ಏಕೆಂದರೆ, ಅನೇಕ ರಾಜಕೀಯ ಮೊದಲಾದ ಕಾರ್ಯಗಳ ಇಡಕು, ತೊಡಕುಗಳಲ್ಲಿ ಸಿಕ್ಕ ತಮ್ಮಂಥವರಿಗೆ ಪುರಸತ್ತು ಸಿಗುವುದು ಕಷ್ಟ. ನಾನು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯೊಂದನ್ನು ಬರೆದಿದ್ದೇನೆ. ಅದು ಈಗಾಗಲೇ ಸಂಪೂರ್ಣವಾಗಿ ಅಚ್ಚಾಗಿದೆ. ಅದಕ್ಕೆ ತಾವು ಒಂದು ಮುನ್ನುಡಿ ಬರೆಯುವಿರಾದರೆ ನನಗೊಂದು ಹೆಚ್ಚಿಗೆಯೆಂದು ಭಾವಿಸುತ್ತೇನೆ. ಹಿರಿಯರ ಆಶೀರ್ವಾದವಂತೂ ನಿಃಸಂದೇಹವಾಗಿ ದೊರಕೀತೆಂದು ತಿಳಿಯುತ್ತೇನೆ. ತಾವು ಉತ್ಕೃಷ್ಟ ಜೀವನ ಚರಿತ್ರೆಗಳನ್ನು ಬರೆದವರು, ಮೊದಲು ಬರೆದವರು. ಆದ್ದರಿಂದ ನನ್ನ ಈ ಸಾಧಾರಣ ಪ್ರಥಮ ಪ್ರಯತ್ನವು ತಮ್ಮ ಮುನ್ನುಡಿಯೊಡನೆ ಕನ್ನಡಿಗರ ಕೈ ಸೇರುವುದರಲ್ಲಿ ಔಚಿತ್ಯವಿದೆ, ಅರ್ಥವಿದೆ.

ತಾವು ಒಪ್ಪುವಿರಾದರೆ ದಯವಿಟ್ಟು ಪತ್ರದ ಮೂಲಕ ಶೀಘ್ರವಾಗಿ ತಿಳಿಸಬೇಕೆಂದು ಪ್ರಾರ್ಥನೆ. ಒಡನೆಯೇ ತಮಗೆ ಪುಸ್ತಕವು ತಲುಪುವಂತೆ ಪ್ರಯತ್ನಿಸುತ್ತೇನೆ.

**–ಕೆ.ವಿ. ಪುಟ್ಟಪ್ಪ**

---

## ಡಿ.ವಿ.ಜಿ. ಬಗ್ಗೆ ಜ್ಞಾನಪೀಠ ಪ್ರಶಸ್ತಿ ದ.ರಾ.ಬೇಂದ್ರೆ

ಡಿವಿಜಿರಲ್ಲವೇ ನಮ್ಮ ಡಿವಿಜಿ ಎಂಬುವರು
ದೀವಿಗೆ ಹೋದರೆ??? ಅವರ ಆಸ್ಥಾನವೇ ಸ್ವರ್ಗ!!
ದಿನದ ಮಾತೇ ಮಂತ್ರ ಋಷಿಗಳಿಗೆ ಯಾವರ್ಗ??
ದಿಗ್ಗಜದ ತಗ್ಗನ್ನು ಯಾರಿನ್ನು ತುಂಬುವರು?
ಒಂದೊಂದು ಗ್ರಂಥವೂ ಅವರ ಸ್ಮಾರಕವಹುದು!
ಬೇರೆ ಜನ ಇರಬಹುದು, ಬೇರೆ ಜನ ಬರಬಹುದು
ಆ ಠೀವಿ!! ಆ ಯಮಕ!! ಯಾರಿಗಿದೆ ಆ ಗಮಕ??
ರುದ್ರಕ್ಕೂ, ಭದ್ರಕ್ಕೂ ಅವರ ರೀತಿಯೇ ಚಮಕ

ಅನ್ಯ ಸಾಹಿತ್ಯಕ್ಕೆ ಇದೇ ಲಾಳಿ, ಇದೇ ಮಗ್ಗ...
ಕಡಲನ್ನೇ ಕಡೆದವಗೆ ಮೃತಿ ಇಲ್ಲ, ಚ್ಯುತಿ ಇಲ್ಲ
ಏನಿದ್ದೆ?? ಏನಾದೆ?? ನುಡಿಸುವರೆ ಆ ಸೊಲ್ಲ!!
'ಕಗ್ಗ' ಹಾಗಿತ್ತು! ಬೇರೆ ಹೃದಯ ಹಗ್ಗ??

ಇಂಥ ಭೀಷ್ಮರಿಗೇಕೆ ಆ ತೇದಿ, ಈ ತೇದಿ??
ಆನೆ ಹೋದುದೇ ಬೀದಿ, ಅವರಿಗದರದೇ ಹಾದಿ!!

**ಅಂಬಿಕಾತನಯದತ್ತ**
**(ದ.ರಾ.ಬೇಂದ್ರೆ)**



■ ಜಿ.ಎಸ್ ಸತ್ಯಮೂರ್ತಿ
9844469581



# ಸುದ್ದಿ ಮನೆ

## ಶುಭ ವಿವಾಹ

ಸಂಘದ ಪೋಷಕರಾದ ಶ್ರೀ ಶ್ರೀಕಂಠೇಶ್ವರ್ ಹಾಗೂ ಶ್ರೀಮತಿ ಪದ್ಮಾವತಿ ಯವರ ಪುತ್ರಿ, ಚಿ.ಸೌ. ಪರಿಮಳ ಅವರ ವಿವಾಹವು ಚಿ. ವಿ. ಬಾಲಚಂದರ್ ಅವರೊಂದಿಗೆ ದಿನಾಂಕ 10.4.2015ರಂದು ಬೆಂಗಳೂರಿನಲ್ಲಿ ನೆರವೇರಿತು.

✦ ✦

ಸಂಘದ ಸದಸ್ಯ ಶ್ರೀ ಎಚ್.ಡಿ. ಗಣೇಶ್ ಮತ್ತು ಶ್ರೀಮತಿ ವಸುಂದರ ಅವರ ಪುತ್ರ ಚಿ. ಅರುಣ್‌ಗಣೇಶ್ ಅವರ ವಿವಾಹವು ಚಿ.ಸೌ. ಸಾಧನಾರವರೊಂದಿಗೆ ದಿನಾಂಕ: 24.4.2015ರಂದು ಬೆಂಗಳೂರಿನಲ್ಲಿ ನೇರವೇರಿತು.

✦ ✦

ಬಾಣಸವಾಡಿ ಶ್ರೀ ರಾಧಾಕೃಷ್ಣ ಮತ್ತು ಸುಂದರಮ್ಮನವರ ಮೊಮ್ಮಗಳು ಸದಸ್ಯ ಅಂಜನ್ ಕುಮಾರರವರ ತಂಗಿ, ಶ್ರೀ ಮಂಜುನಾಥ್ ಮತ್ತು ಶ್ರೀಮತಿ ರತ್ನಮ್ಮನವರ ಪುತ್ರಿ ಚಿ.ಸೌ ಸೌಮ್ಯ ಹಾಗೂ ಚಿ. ಅಭಿಜಿತ್‌ರವರ ವಿವಾಹ 6.5.2015ರಂದು ಬಾಣಸವಾಡಿಯಲ್ಲಿ ನೆರವೇರಿತು.

✦ ✦

ಸಂಘದ ಪೋಷಕ ಶ್ರೀ ವೆಂಕಟಗಿರಿಯಪ್ಪ ಅವರ ಮೊಮ್ಮಗ ಹಾಗೂ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ ಮತ್ತು ಶ್ರೀಮತಿ ಕಲ್ಪನ ಅವರ ಪುತ್ರ ಚಿ. ಮಾತಂಗ್ ಶೇಷಗಿರಿಯ ವಿವಾಹವು ಚಿ.ಸೌ. ಯಶೋಧರ ಉಡುಪ ಅವರೊಂದಿಗೆ ದಿನಾಂಕ: 20.5.2015ರಂದು ಬೆಂಗಳೂರಿನಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಬೃಹಚ್ಚರಣ ಪತ್ರಿಕೆಗೆ ಶ್ರೀ ವಿ.ಎಸ್. ಮಣಿ ಅವರು 1,000 ರೂಪಾಯಿಗಳನ್ನು ಸಂಘಕ್ಕೆ ದೇಣಿಗೆಯನ್ನು ನೀಡಿರುತ್ತಾರೆ.

✦ ✦

ಸಂಘದ ಸದಸ್ಯೆ ಶ್ರೀಮತಿ ಸಂಧ್ಯಾ ಮತ್ತು ಡಾ. ಎ.ಆರ್. ರಾಜೇಂದ್ರ ಅವರ ಪುತ್ರ ಚಿ. ರಾಹುಲ್ ಎ.ಆರ್. ಅವರ ವಿವಾಹವು ಚಿ.ಸೌ. ಎನ್. ವಿದ್ಯಾಶ್ರೀ ಅವರೊಂದಿಗೆ ದಿನಾಂಕ : 7.6.2015ರಂದು ಬೆಂಗಳೂರಿನಲ್ಲಿ ನೆರವೇರಿತು.

**ನೂತನ ದಂಪತಿಗಳಿಗೆ ಸಂಘವು ಶುಭ ಹಾರೈಸುತ್ತದೆ.**

## ಉಪನಯನ

ಸಂಘದ ಅಧ್ಯಕ್ಷರಾದ ಶ್ರೀ ಎಸ್. ಸೋಮಸುಂದರ ಮತ್ತು ಶ್ರೀಮತಿ ಜಯಶ್ರೀ ಅವರ ಮೊಮ್ಮಗ ಹಾಗೂ ಪೋಷಕರಾದ ರಘುನಂದನ ಮತ್ತು ಶ್ರೀಮತಿ ಸುಷ್ಮಾ ಅವರ ಪುತ್ರನಾದ ಚಿ.ಆರ್. ಆತ್ರೇಯನಂದನನ ಉಪನಯನವು ದಿ. 6.4.2015 ರಂದು ಬೆಂಗಳೂರಿನಲ್ಲಿ ನೆರವೇರಿತು. ಈ ಸಂದರ್ಭದಲ್ಲಿ 'ಬೃಹಚ್ಚರಣ' ಪತ್ರಿಕೆಗೆ ದೇಣಿಗೆಯನ್ನು 1,000/– ರೂಪಾಯಿಗಳನ್ನು ನೀಡಿರುತ್ತಾರೆ.

✦ ✦

ಸಂಘದ ಸದಸ್ಯರಾದ ವಿದ್ವಾನ್. ದಕ್ಷಿಣಾಮೂರ್ತಿ ಮತ್ತು ಶ್ರೀಮತಿ ಉಷಾ ರವರ ಪುತ್ರ ಚಿ. ಅಭಿರಾಮ್ ಅವರ ಉಪನಯನವು ದಿನಾಂಕ : 23.4.2015 ರಂದು ಬೆಂಗಳೂರಿನಲ್ಲಿ ನೆರವೇರಿತು.

✦ ✦

ಸಂಘದ ಅಧ್ಯಕ್ಷರಾದ ಶ್ರೀ ಎಸ್. ಸೋಮಸುಂದರ ಮತ್ತು ಶ್ರೀಮತಿ ಜಯಶ್ರೀ ಅವರ ಮೊಮ್ಮಗ ಹಾಗೂ ಪೋಷಕರಾದ ಡಾ. ರಮಾದೇವಿ ಮತ್ತು ಡಾ. ಗುರುಪ್ರಸಾದ್ ಅವರ ಪುತ್ರನಾದ ಚಿ. ಆದಿತ್ಯನ ಉಪನಯನವು ದಿ. 28.5.2015ರಂದು ಬೆಂಗಳೂರಿನಲ್ಲಿ ನೆರವೇರಿತು. ಈ ಸಂದರ್ಭದಲ್ಲಿ 'ಬೃಹಚ್ಚರಣ' ಪತ್ರಿಕೆಗೆ ದೇಣಿಗೆಯನ್ನು 1,000/– ರೂಪಾಯಿಗಳನ್ನು ನೀಡಿರುತ್ತಾರೆ.

**ಸಂಘವು ವಟುಗಳಿಗೆ ಶುಭ ಹಾರೈಸುತ್ತದೆ.**

# ಚಿಣ್ಣರ ಅಂಗಳ




ಇದೇನಿರಬಹುದು ಎಂಬ ಕುತೂಹಲ ಬರುವುದು ಸಹಜ.

ಈ ಪೆನ್ಸಿಲ್ (ಸೀಸದಕಡ್ಡಿ), ಈ ಅಳಿಸುವ ರಬ್ಬರ್, ಈ ಶಾರ್ಪನರ್ (ಮೆಂಡರ್), (ಸೀಸವನ್ನು ಕೆರೆದು ಚೂಪಾಗಿಸುವುದು) ಇವೆಲ್ಲಾ ನಾವು ಸಣ್ಣವರಾಗಿದ್ದಾಗ ಶಾಲೆಯಲ್ಲಿ ಉಪಯೋಗಿಸುತ್ತಿದ್ದವುಗಳು. ಈಗೇಕೆ ಇವುಗಳ ಪರಿಚಯ ಎಂಬ ಪ್ರಶ್ನೆ?

ಇವುಗಳಿಗೂ ನಮ್ಮ ಜೀವನ ಕ್ರಮಕ್ಕೂ ಏನಾದರೂ ಸಂಬಂಧ ಗಳಿವೆಯೇ? ಹಾಗೂ ಇವುಗಳಿಂದ ನಮ್ಮ ಜೀವನದಲ್ಲಿ ಏನಾದರೂ ಪಾಠಗಳನ್ನು ಕಲಿಯ ಬಹುದೇ...? ಎಂದು ಚಿಂತನೆ ಮಾಡೋಣ.

ಸೀಸದ ಕಡ್ಡಿ (pencil) ಮತ್ತು ಅದರ ಜೊತೆ ಅಂಟಿಕೊಂಡಿರುವ ರಬ್ಬರ್ (eraser)....!!! ಇವನ್ನು 'ಗಂಡ' ಮತ್ತು 'ಹೆಂಡತಿ' ಮತ್ತು sharpener ಕುಟುಂಬದ ಸದಸ್ಯ ಅಥವಾ ಸ್ನೇಹಿತ ಎಂದುಕೊಳ್ಳೋಣ.

ಗಂಡನೆಂಬ ಸೀಸದ ಕಡ್ಡಿ ಬರೆಯಲು ಪ್ರಾರಂಭಿಸುವುದನ್ನು 'ದುಡಿಮೆ ಅಥವಾ ಗಳಿಕೆ' ಎಂದುಕೊಳ್ಳೋಣ, ಆ ದುಡಿಮೆಯ ಮಾರ್ಗವನ್ನು ಸದಾ ಹಿಂಬಾಲಿಸುವುದು ರಬ್ಬರ್ (ಎರೇಝರ್) ಎಂಬ ಹೆಂಡತಿ. ಮಾರ್ಗ ತಪ್ಪು ಎಂದು ತಿಳಿದಾಗ, ಹೆಂಡತಿ ಎಂಬ ರಬ್ಬರ್ ಅದನ್ನು ಆಗಾಗ ಅಳಿಸಿ, ತಿದ್ದಿ, ಸರಿಯಾದ ಮಾರ್ಗದತ್ತ ಮತ್ತೆ ಕೊಂಡೊಯ್ಯುವ ಜವಾಬ್ದಾರಿ. ಎರೇಝರ್ (ಅಳಿಸುವ ರಬ್ಬರ್) ಎಂಬ ಹೆಣ್ಣು ಸಾಮಾನ್ಯವಾಗಿ ಎಂದೂ ತಪ್ಪಾದ ಹಾದಿ ಹಿಡಿಯಲು ಪ್ರಯತ್ನಿಸುವುದಿಲ್ಲ. ತಪ್ಪು ಮಾಡಿದ್ದನ್ನು ತಿದ್ದುವ ಕೆಲಸ ಮಾತ್ರ ಪ್ರಾಮಾಣಿಕವಾಗಿ ನಿರ್ವಹಿಸುತ್ತದೆ.

ಇನ್ನು ಈ ಶಾರ್ಪನರ್ – ಸ್ವಲ್ಪ ಡಬಲ್ ಗೇಮ್ ನ ಆಸಾಮಿ. 'ಶತ್ರು' ಮತ್ತು 'ಮಿತ್ರ' (ಕುಟುಂಬಗಳಲ್ಲಿ ಇಂತಹವರು ಸಾಮಾನ್ಯ)

ತಪ್ಪು ಮಾಡುತ್ತಾ ಹೋದಾಗ, ಇನ್ನಷ್ಟು ಚೂಪಾಗಿಸಿ ಮತ್ತಷ್ಟು ತಪ್ಪು ಮಾಡಲು ಪ್ರಚೋದಿಸುತ್ತದೆ. ಪರಿಣಾಮ ಸೀಸದ ಕಡ್ಡಿ ಸವೆದೂ, ಸವೆದೂ ಗಿಡ್ಡಾಗುತ್ತದೆ. ಮತ್ತೊಂದು ದೃಷ್ಟಿಕೋನದಿಂದ ನೋಡಿದಾಗ ದುಡಿಮೆ ಎಂಬ ಶಕ್ತಿ ಕುಂದಿದಾಗ., ನಾನಿದ್ದೇನೆ...!!! ನಿನ್ನ ದುಡಿಮೆಗೆ ಚೂಪಾದ, ಮೊನೆಚಾದ ಶಕ್ತಿಯನ್ನು ತುಂಬುತ್ತೇನೆ ಎಂಬಂತಿರುತ್ತದೆ. ಹಾಗಾಗಿ ಈ 'ಜಾಮಿತ್ರಿ' ಎಂಬ ಡಬ್ಬದಲ್ಲಿ (geometry box) ಇವೆಲ್ಲ ಜೊತೆಯಾಗಿಯೇ ಇದ್ದರೂ ಕರ್ತವ್ಯಗಳು ಬೇರೆ ಬೇರೆ.

ಹಾಗಾಗಿ, ಸಂಸಾರದಲ್ಲಿಯೂ ಸಹಾ ಒಬ್ಬೊಬ್ಬರ ಕರ್ತವ್ಯಗಳು ಬೇರೆ ಬೇರೆಯಾದರೂ ಕೇಂದ್ರ ಬಿಂದು 'ರಬ್ಬರ್' ಎಂಬ ಹೆಂಡತಿ (ಅಜ್ಜಿ, ತಾಯಿ) ಎಂಬ ಹೆಣ್ಣು. ಬದುಕಿನಲ್ಲಿ ದುಡಿಮೆ, ಗಳಿಕೆ, ಎಂಬುದು ಒಂದು ಭಾಗವಾದಲ್ಲಿ, ಗಳಿಸಿದ್ದನ್ನು ಉಳಿಸಿ, ಕಾಪಾಡಿ ಸರಿತೂಗಿಸಿ, ಅವಶ್ಯಕತೆಗೆ ಮಾತ್ರ ಬಳಸುವ ಜವಾಬ್ದಾರಿ ಮತ್ತು ಜಾಣತನ ಹೆಣ್ಣಿಗೆ ಹೆಚ್ಚು ಎಂಬುದು ಗಮನಿಸಬೇಕಾದ ಅಂಶ.

ಮಾತೃ, ಪಿತೃ, ಆಚಾರ್ಯ ಮತ್ತು ಅತಿಥಿ ದೇವೋಭವ ಎನ್ನುವಾಗ, ಮೊಟ್ಟ ಮೊದಲನೆಯದೇ..., 'ಮಾತೃ ದೇವೋಭವ'.

ಜಾಮಿತ್ರಿ ಡಬ್ಬದ ರಬ್ಬರ್ (ಎರೇಝರ್) ಪಾತ್ರಧಾರಿ ಅಜ್ಜಿ, ಅಮ್ಮ, ಹೆಂಡತಿಗೆ ಒಂದು ಸಲಾಮ್ ಎನ್ನೋಣವೇ...!!

ಧನ್ಯವಾದಗಳು.


■ವಿ.ಎಸ್.ಮಣಿ
98450 55582




## ಹತ್ತು ವ್ಯತ್ಯಾಸ ಕಂಡುಹಿಡಿದು ಬಣ್ಣ ತುಂಬಿರಿ

■ಡಿ. ಗೋವಿಂದರಾವ್
94825 36048







## ಇವರು ಯಾರು ?

ವಿಶ್ವಸಂಸ್ಥೆಯಲ್ಲಿ ಹಾಡಿ, ಮೊಟ್ಟ ಮೊದಲ 'ಮ್ಯಾಗ್‌ಸೇಸೆ' ಪ್ರಶಸ್ತಿ ಪಡೆದ ಗಾನ ಕೋಗಿಲೆ, ಭಕ್ತ ಮೀರಾದಲ್ಲಿ ನಟನೆಗೆ ಶ್ರೇಷ್ಠ ಪ್ರಶಸ್ತಿ ಪಡೆದ ಮಹಿಳಾ ಮಣಿ ಯಾರು ?

ಒಲಂಪಿಕ್ಸ್‌ನಲ್ಲಿ ಭಾಗವಹಿಸಿದ ಕನ್ನಡದ ಚಿಗರೆ ಕ್ರೀಡಾಸಾಧನೆಗೆ ಅರ್ಜುನ ಪ್ರಶಸ್ತಿ ಪಡೆದ ಕೊಡಗಿನ ಬೆಡಗಿ ಯಾರು ?

ಆರ್ಯಭಟ, ಭಾಸ್ಕರಾದಿ ಉಪಗ್ರಹಗಳ ಉಡ್ಡಯನ ಮತ್ತು ಭಾರತದ ಅಂತರಿಕ್ಷ ಕಾರ್ಯಕ್ರಮಗಳ ಯಶಸ್ಸಿನ ಹಿಂದಿನ ಶಕ್ತಿ. ಮೂಲತಃ ಉಡುಪಿಯವರು, ಈ ಬಾಹ್ಯಾಕಾಶ ವಿಜ್ಞಾನಿ ಯಾರು ?

ಮರಗಳನ್ನೇ ದತ್ತು ತೆಗೆದುಕೊಂಡು ಪೋಷಿಸಿ, ಪರಿಸರಕ್ಕೆ ಹಸಿರುಡುಗೆ ತೊಡಿಸಿ, ದಾರಿ ಹೋಕರಿಗೆ ನೆರಳಾಗಿಸಿ, ಮಣ್ಣಿನ ಮಗಳು ಎಲ್ಲರಿಗೂ ಅಕ್ಕ. ರಾಷ್ಟ್ರ ಪ್ರಶಸ್ತಿ ವಿಜೇತೆ ಯಾರು ?

ಉತ್ತರ : ಡಾ. ಎಂ.ಎಸ್. ಸುಬ್ಬಲಕ್ಷ್ಮಿ, ಅಶ್ವಿನಿ ನಾಚಪ್ಪ, ಪ್ರೊ. ಯು.ಆರ್. ರಾವ್, ಸಾಲುಮರದ ತಿಮ್ಮಕ್ಕ



ಪುಟಾಣಿ ಕಲಾವಿದೆ





■ ಮೇಘನಾ ಶಿವರಾಮ್
9ನೇ ತರಗತಿ

## ಸ್ಫೂರ್ತಿಗಾನ

ಪುಟ್ಟ ಹೆಜ್ಜೆಯಾದರೇನು
ದಿಟ್ಟ ಹೆಜ್ಜೆ ಇಟ್ಟು ಸಾಗು
ಅಟ್ಟಿ ಎಲ್ಲ ಕೆಟ್ಟ ಗುಣವ
ಕಟ್ಟು ನಲ್ಮೆ ನಾಡನು ॥

ತೊಟ್ಟು ಪಣವ ಧೀರನಾಗಿ
ಇಟ್ಟು ಮನವ ದೇವನಲ್ಲಿ
ಮೆಟ್ಟಿ ನಿಲ್ಲು ಭಯಗಳನ್ನು
ದಿಟ್ಟನಾಗಿ ಗೆಳೆಯನೆ ॥

ಬೆಟ್ಟದಂಥ ಕಷ್ಟಗಳನು
ಮಟ್ಟ ಹಾಕು ಪೆಟ್ಟುಗಳನು
ಗಟ್ಟಿ ಮನಸು ಮಾಡಿ ನೀನು
ಜಟ್ಟಿಯಂತೆ ಎದುರಿಸು ॥

ಮುಟ್ಟುವತನಕ ಗುರಿಗಳನ್ನು
ಅಟ್ಟಾಚೆಗೆ ಆಲಸ್ಯ
ಪಟ್ಟು ಹಿಡಿದು ಹೋರಾಡು
ಕಟ್ಟ ಕಡೆಯವರೆವಿಗೂ ॥



■ ಶುಭ ಗಾಯತ್ರಿ
94496 35563

## ಕಿವಿಮಾತು

2 ಹಿಡಿ ಹುರಿಗಡಲೆ ತಿಂದು ನೀರು ಕುಡಿಯದೇ ಇದ್ರೆ ನೆಗಡಿ ಬಾಧೆ ಉಪಶಮನವಾಗುತ್ತದೆ. ನೀರಿನಲ್ಲಿ ಹೆಚ್ಚು ಕೆಲಸ ಮಾಡಿದಾಗ, ಕೈ–ಕಾಲು ಬೆರಳುಗಳ ಸಂದಿಯಲ್ಲಿ ಉರಿಯುತ್ತಿದ್ದರೆ, ಅರಿಶಿನಪುಡಿ ಮತ್ತು ಎಳ್ಳೆಣ್ಣೆ ಬೆರೆಸಿದ ಮುಲಾಮು ಮಾಡಿ ಹಚ್ಚಿದರೆ, ಉರಿ ಶಮನವಾಗುತ್ತದೆ.

✦ ✦

ನಿಂಬೆರಸ ನೆಲದ ಮೇಲೆ ಬಿದ್ದು ಕಲೆಯಾಗಿದ್ದರೆ, ವ್ಯಾಸಲಿನ್ ಬಳಿದು ಮೃದುವಾಗಿ ಉಜ್ಜಿದರೆ ಕಲೆ ಹೋಗುತ್ತದೆ.

–ಎಂ.ಆರ್. ಸೂರ್ಯನಾರಾಯಣ

ತುಂಬೆಗಿಡದ ಎಲೆ ನೀರಿನಲ್ಲಿ ಕುದಿಸಿ ಆ ನೀರಿಗೆ ಜೇನುತುಪ್ಪ ಬೆರೆಸಿ ಕುಡಿದರೆ ಕೆಮ್ಮು ಕಡಿಮೆಯಾಗುತ್ತದೆ.

–ಮಮತಾ ಶಿವಕುಮಾರ್

## ಸಂಘಕ್ಕೆ ಹೊಸ ಸದಸ್ಯರು

**ಶ್ರೀಮತಿ ದೀಪ್ತಿ ಅಜಯ್**
(ಶ್ರೀ ಆರ್.ಎಸ್. ವೆಂಕಟೇಶ್ ಮತ್ತು ಶ್ರೀಮತಿ ರಾಧಾರವರ ಪುತ್ರಿ)

**ವಿಕ್ರಂ ರಾಜಾಪೂರ್**
(ಶ್ರೀ ರಾಜಾಪುರ ಶ್ರೀಧರ್ ಮತ್ತು ಶ್ರೀಮತಿ ಮಂಜುಳಾ ಪುತ್ರ)

## ವಿದ್ಯಾನಿಧಿಗೆ ದಾನಿಗಳು

| | |
|---|---|
| ಶ್ರೀಮತಿ ಅಂಬಾ ನಡವತ್ತಿ | 2,000/– |
| ಸದಸ್ಯ ಶ್ರೀ ಕೆ. ಬಿ. ದಾಸ್ | 1,000/– |
| ಶ್ರೀ ರಘುನಂದನ್, ವಕೀಲರು | 1,000/– |
| ಡಾ. ರಮಾದೇವಿ ಗುರುಪ್ರಸಾದ್ | 1,000/– |
| ಶ್ರೀಮತಿ ಶಾರ್ವರಿ | 1,000/– |
| ಶ್ರೀ ಎಸ್. ರಾಘವೇಂದ್ರ | 1,000/– |
| ಡಾ. ರಾಮಯ್ಯ | 1,000/– |

## ಅನ್ನದಾನಕ್ಕೆ ದಾನಿಗಳು

| | |
|---|---|
| ಶ್ರೀಮತಿ ಅಂಬಾ ನಡವತ್ತಿ | 2,000/– |

## ಬೃಹಚ್ಚರಣ ಪತ್ರಿಕೆಗೆ ಪ್ರಾಯೋಜಕರು

| | | |
|---|---|---|
| 1. | ಶ್ರೀಮತಿ ಸರಸ್ವತಿ ನಟರಾಜನ್ | ರೂ. 1000/– |
| 2. | ಶ್ರೀ ಎಸ್. ಸೋಮಸುಂದರ | ರೂ. 1000/– |
| 3. | ಶ್ರೀಮತಿ ಅಂಬಾ ನಡವತ್ತಿ | ರೂ. 1,000/– |
| 4. | ಶ್ರೀ ಶ್ರೀನಿವಾಸನ್ | ರೂ. 1,000/– |
| 5. | ಶ್ರೀ ಎಸ್. ಸಿ. ಶ್ರೀನಿವಾಸ್ | ರೂ. 1,000/– |
| 6. | ಶ್ರೀ ಎಸ್. ಸತ್ಯನಾರಾಯಣ್ | ರೂ. 1,000/– |
| 7. | ಶ್ರೀ ರಘುನಂದನ್ | ರೂ. 1,000/– |
| 8. | ಶ್ರೀಮತಿ ಡಾ. ರಮಾದೇವಿ | ರೂ. 1,000/– |
| 9. | ಶ್ರೀ ವಿ. ಎಸ್. ಮಣಿ | ರೂ. 1,000/– |
| 10. | ಶ್ರೀ ಟಿ.ಎಸ್. ಮಣಿ | ರೂ. 500/– |
| 11. | ಶ್ರೀ ಕೆ.ಬಿ.ಎಸ್. ಮಣಿ | ರೂ. 500/– |

## ನೆನಪಿನಂಗಳದಿಂದ ಛಾಯಾಚಿತ್ರ ೨೧ ಮತ್ತು ೨೨



ಸಣ್ಣೆ ರಾಮಚಂದ್ರಯ್ಯನವರಿಗೆ ಮುಮ್ಮೊಗ ಚಿ. ರಘುನಂದನ ಹುಟ್ಟಿದ ಸಂದರ್ಭದಲ್ಲಿ ನೆರವೇರಿದ ಕನಕಾಭಿಷೇಕ–1975




1963 ಉತ್ತರ ಭಾರತ ಪ್ರವಾಸದಿಂದ ಹಿಂದಿರುಗಿದ ಮೇಲೆ ಶ್ರೀ ಆರ್. ವೆಂಕಟರಾಮಯ್ಯ ಕುಟುಂಬ ವರ್ಗದವರನ್ನು ಬರಮಾಡಿಕೊಂಡ ಹಿತೈಷಿ ಬಂಧುಗಳು

# ವಾರ್ತಾ ಚಿತ್ರಗಳು



31.5.2015ರಂದು ವಿದ್ವಾನ್ ಆರ್.ಎ. ದಕ್ಷಿಣಾಮೂರ್ತಿಯವರ ವೀಣಾವಾದನದ 24 ಕೃತಿಗಳ 'ವೀಣಾಸುನಾದ' ಅಡಕ ಮುದ್ರಿಕೆಯನ್ನು ಬೃಹಚ್ಚರಣ ಸಂಘದ ಅಧ್ಯಕ್ಷೆ ಶ್ರೀ ಸೋಮಸುಂದರ ಅವರಿಂದ 'ನಮಮಂತ್ರಾಲಯ'ದ ಕಲ್ಯಾಣ ಮಂಟಪದಲ್ಲಿ ಲೋಕಾರ್ಪಣೆ ಮಾಡಲಾಯಿತು.



"ರಸ ಸಂಜೆ" ಕಲಾವಿದರೊಂದಿಗೆ ಸಂಘದ ಸದಸ್ಯರು



ರಾಮೋತ್ಸವ ಸಂಗೀತದಲ್ಲಿ ಕುಮಾರಿ ವಾಣಿಶ್ರೀ

## ನಾವು ಮತ್ತು ನಮ್ಮ ಸಮುದಾಯ



ಬೃಹಚ್ಚರಣ ಪಂಗಡದವರು ಇತ್ತೀಚಿನವರೆಗೂ ಹೆಚ್ಚಾಗಿ ಗ್ರಾಮ ವಾಸಿಗಳಾಗಿದ್ದುದು ತಿಳಿದಿರುವ ವಿಷಯ. ಹಿಂದೆ ರಾಜರು, ಪಾಳೆಯಗಾರರು ರಾಷ್ಟ್ರದ ಆಡಳಿತ ನಡೆಸುತ್ತಾ ಹಳ್ಳಿಗಳ ನೆಮ್ಮದಿಗೆ ಕಾರಣಕರ್ತರಾಗಿದ್ದರು. ನಮ್ಮ ಪೂರ್ವಿಕರಲ್ಲಿ ಅನೇಕರು ರಾಷ್ಟ್ರಾಡಳಿತದ ಭಾಗವಾಗಿದ್ದು ಕೊಂಡು ಭೂ ಉಪಯೋಗ, ಕಂದಾಯ ವಸೂಲಿ, ದಾಖಲೆ, ಲೆಕ್ಕಪತ್ರಗಳನ್ನು ನಿರ್ವಹಿಸುತ್ತಾ ಆಳುಗರಿಗೆ ನಿಷ್ಠೆಯಿಂದಿದ್ದುಕೊಂಡಿದ್ದರು. ಇವರುಗಳು ಶ್ಯಾನುಭೋಗ, ಕರಣಿಕ, ಕುಲಕರ್ಣಿ ಎಂದು ಕರೆಯಲ್ಪಡುತ್ತಿದ್ದರು. ಇವರುಗಳು ಆಳುಗರು ಮತ್ತು ಜನಸಾಮಾನ್ಯರ ನಡುವಿನ ಕೊಂಡಿಯಾಗಿದ್ದರು. ರಾಜ್ಯಾಡಳಿತವು ಸುಸೂತ್ರವಾಗಿ ಜರುಗಲು, ಅಳುಗರು ಮತ್ತು ಪ್ರಜೆಗಳ ನಡುವೆ ಉತ್ತಮ ಬಾಂಧವ್ಯ ಉಳಿದುಕೊಂಡು ಬರಲು ಇವರ ಪಾತ್ರ ಮುಖ್ಯವಾಗಿದ್ದಿತು. ಇವರುಗಳ ಸೇವೆಯನ್ನು ಪರಿಗಣಿಸಿ ಆಳುಗರು ಇವರಿಗೆ ಜಮೀನು, ಗ್ರಾಮಗಳ ಉಂಬಳಿಯನ್ನು ನೀಡಿ ಪೋಷಿಸುತ್ತಿದ್ದರು.

ಇವರಲ್ಲಿ ಅನೇಕ ಮಹನೀಯರು ತಮಗಿದ್ದ ನಿಯಮಿತ ಆದಾಯದಲ್ಲಿಯೇ ಅನ್ನದಾನ, ವಿದ್ಯಾದಾನ ಮುಂತಾದ ಜನಹಿತ ಕಾರ್ಯಗಳನ್ನು ನಡೆಸುತ್ತಿದ್ದರು. ದೈವಭಕ್ತರೂ, ಧರ್ಮಭೀರುಗಳೂ ಆಗಿದ್ದ ಇವರುಗಳು ಅನುದಿನವೂ ದೈವಪೂಜೆ, ವ್ರತ, ಅತಿಥಿ ಅಭ್ಯಾಗತರ ಸತ್ಕಾರ ಮೊದಲಾದ ಆಚಾರ, ಸತ್ಸಂಪ್ರದಾಯಗಳನ್ನು ಉಳಿಸಿ, ಬೆಳೆಸಿಕೊಂಡು ಬಂದಿದ್ದರು. ಇವರುಗಳಲ್ಲನೇಕರು ಬಡತನದ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳಿಗೆ ವಿದ್ಯಾಪೋಷಣೆ, ಪ್ರೋತ್ಸಾಹಗಳನ್ನು ನೀಡುತ್ತಿದ್ದುದುಂಟು.

ಸ್ವಾತಂತ್ರ್ಯೋತ್ತರದಲ್ಲಿ ಭೂಸುಧಾರಣಾ ಕಾನೂನಿನನ್ವಯ ಉಂಬಳಿ, ಇನಾಮುಗಳು ಅನೂರ್ಜಿತವಾಗಿ ಇವರಲ್ಲನೇಕರು ತಮ್ಮ ಪೂರ್ವಿಕರಿಗೆ ದೊರಕಿದ್ದ ಗ್ರಾಮ, ಭೂಮಿಗಳನ್ನು ಕಳೆದುಕೊಂಡು ಪಟ್ಟಣಗಳಿಗೆ ವಲಸೆ ಬಂದಿರುತ್ತಾರೆ. ಬದಲಾದ ಕಾಲಧರ್ಮದಲ್ಲಿ ಈ ರೀತಿಯ ಜನಸೇವೆಯ ಸಿಹಿನೆನಪು ಮಾತ್ರ ಉಳಿದಿದೆ.

ನಮ್ಮ ಜನಾಂಗದವರು ವಿದ್ಯಾಪಕ್ಷಪಾತಿಗಳೂ, ಕಲಾರಾಧಕರೂ ಆಗಿದ್ದುಕೊಂಡು ಲೌಕಿಕವಾಗಿಯೂ ಅತಿ ಎತ್ತರದ ಸ್ಥಾನಗಳಲ್ಲಿರುತ್ತಾರೆ. ಇತೀಚೆಗೆ ನಮ್ಮವರೇ ಆದ ವಿದ್ವಾನ್ ದಕ್ಷಿಣಾಮೂರ್ತಿಯವರ ವೀಣಾವಾದನ ಕಛೇರಿಯು ಎಲ್ಲರಿಗೂ ಆಪ್ಯಾಯಮಾನವಾಗಿದ್ದಿತು. ನಮ್ಮವರೇ ಆದ ತೀರ್ಥರೂಪ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ' ಕೃತಿಯು ಕನ್ನಡದ ಭಗವದ್ಗೀತೆ ಎಂದೇ ಪ್ರಸಿದ್ಧವಾಗಿದೆ.

ನಮ್ಮವರ ಜನಹಿತಕಾರ್ಯಗಳು ಈಗಿನ ಕಾಲಕ್ಕನುಗುಣವಾಗಿ ವೈಯುಕ್ತಿಕ ಮಟ್ಟದಲ್ಲಿ ಅಲ್ಲದೆ ಬೃಹಚ್ಚರಣ ಸಂಘದ ಮೂಲಕವೂ ಸಾಧಿಸಲ್ಪಡುತ್ತಿವೆ. ನಮ್ಮ ಎಲ್ಲರ, ಅದರಲ್ಲೂ ನಮ್ಮ ಜನಾಂಗದ ಯುವಜನರ ಬೆಂಬಲವನ್ನು ಪಡೆದಿರುವ ಸಂಘಕ್ಕೆ ಒಳ್ಳೆಯ ಭವಿಷ್ಯ ಇರುತ್ತದೆ.

**ಎಚ್. ಕೃಷ್ಣಸ್ವಾಮಿ**
ಸಂಘದ ಸ್ಥಾಪಕ ಸದಸ್ಯ

# ಕನ್ನಡಿ



ಈ ಕಾಲದಿ ಸರ್ವವ್ಯಾಪ್ತಮಯ ಕನ್ನಡಿ
ಶುಭ ಸಮಾರಂಭಕ್ಕೆ ಕಳಶ ಕನ್ನಡಿ ಅಗತ್ಯ.

ದೇವಸ್ಥಾನಗಳಲ್ಲಿ ಕನ್ನಡಿ ಸೇವೆ ಇದೆ. ಸೌಂದರ್ಯ ಖನಿಯಾದ ಭಗವಂತನ ಅಲಂಕಾರದ ನಂತರ ತೋರಿಸುತ್ತಾರೆ. ಗೌರಿಹಬ್ಬಕ್ಕೆ ಮೊರದ ಬಾಗಿನಕ್ಕೆ ಕನ್ನಡಿ ಮತ್ತು ದೈವದ ಹಿಂಭಾಗದಲ್ಲಿ ದೊಡ್ಡ ಕನ್ನಡಿ ಇಟ್ಟಿರುತ್ತಾರೆ. ಘಾಟಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಇದು ಕಾಣಬಹುದು. ಇದು ಶುಭಸಂಕೇತವೂ ಹೌದು. ಬೇಲೂರು ಶಿಲಾಬಾಲಿಕೆ ಕರದಲ್ಲಿ ಕನ್ನಡಿ. ಅಂದಚೆಂದ ನೋಡಲು ಇದೆ. ಡಿ.ವಿ.ಜಿ. ಅವರ ಅಂತಃಪುರದ ಗೀತೆಗಳಲ್ಲಿ ಇದರ ವರ್ಣನೆ ಬರುತ್ತದೆ. ನಮ್ಮ ಹೆಮ್ಮೆಯ ಹಿರಿಯ ಆಧ್ಯಾತ್ಮ ಚಿಂತಕ 'ಕಗ್ಗ'ದಲ್ಲೂ ವರ್ಣಿಸಿದ್ದಾರೆ. (ಡಿ.ವಿ.ಜಿ. ಅವರು)

**ಸೊಗಸು ಬೇಡದ ನರಪ್ರಾಣಿಯೆಲ್ಲಿಹುದಯ್ಯಾ?**
**ಮಗುವೆ, ಮುದುಕನೆ, ಪುರಾಣಿಕ, ಪುರೋಹಿತನೆ.**
**ಜಗದ ಕಣ್ಣಿಕ್ಕಿದೆಡೆ ಮುಕುರದೆದುರೊಳು ನಿಂತು**
**ಮೊಗವ ತಿದ್ದುವರೆಲ್ಲ** —*ಮಂಕುತಿಮ್ಮ*

ಶಾಸ್ತ್ರದಿ ಸಹ ಉದಯಕಾಲದಿ ಎದ್ದು ಕನ್ನಡಿಯಲ್ಲಿ ಮೊಗವ ನೋಡಿರೋ. ಪ್ರಸನ್ನತೆ ಇದ್ದರೆ ಹೊರಗೆ ಬಾ ಜನರಿಗೆ ಸಂತಸ ಪಡಿಸು. ಗಂಟು ಮೋರೆಯೋ, ಬೇಸರವೋ, ಖಿನ್ನತೆಯೋ, ದುಃಖವೋ ಇದ್ದರೆ ಏಕಾಂಗಿಯಾಗಿ ಅನುಭವಿಸು ಹಂಚಬೇಡ ಇತರರಿಗೆ 'ಇದು ವಿವೇಕಾನಂದ ವಾಣಿ' ಈಗಿನ ಕಾಲದಿ ಆಧುನಿಕ ಜಗತ್ತಿಗೆ ಅತ್ಯಗತ್ಯ ಕನ್ನಡಿ. ಮಹಿಳೆಯರ ಜಂಭದ ಚೀಲದಿ, ಕನ್ನಡಿ ವಾಹನಗಳಲ್ಲಿ, ಜೇಬಿನಲ್ಲಿ, ಉಪಹಾರ ಮಂದಿರಗಳಲ್ಲಿ ಕೈತೊಳೆಯುವಲ್ಲಿ ಕಛೇರಿಗಳಲ್ಲಿ ಆಸ್ಪತ್ರೆಗಳಲ್ಲಿ, ಪ್ರತಿಷ್ಠಿತ ಸ್ಥಳದಲ್ಲಿ ಕನ್ನಡಿಯ ಗೋಡೆ ಇರುತ್ತವೆ. ಯಾವ ದಿಕ್ಕಿನಲ್ಲೂ ನೀವೆ ಕಾಣುವಿರಿ. ಒಡವೆ ಅಂಗಡಿಗಳಲ್ಲಿ, ಸಿನಿಮಾ ಮಂದಿರದಲ್ಲಿ, ಸ್ನಾನಗೃಹದಲ್ಲಿ, ಮದುವೆ ಮನೆಯಲ್ಲಿ, ಸೌಂದರ್ಯ ವರ್ಧಕ ಗೃಹದಿ ಇನ್ನು ಸಿನಿಮಾ ವಿಚಾರದಿ ಅನುಗಾಲವೂ ಕನ್ನಡಿಯದೇ ಕೆಲಸ. ನಟ ನಟಿಯರು ಅಲಂಕಾರ ತಿದ್ದುತಿರಲೇಬೇಕು ಕನ್ನಡಿ ಹಿಡಿದು ಸೇವಕರು ನಿಂತಿರಬೇಕು. ಅಬ್ಬಾ ಈ ಕನ್ನಡಿ ಮಹಾತ್ಮೆ ವರ್ಣಿಸಲು ಅಸಾಧ್ಯ. ರೂಪಕ್ಕೂ ಸ್ವರೂಪ ದರ್ಶನಕ್ಕೂ ಬೇಕು. ರೂಪಕ್ಕೆ ಬಾಹ್ಯ ಕನ್ನಡಿ. ಅಂತರ್ಯಕ್ಕೆ ಮನದ ಕನ್ನಡಿ ಅಗತ್ಯ.

ಇನ್ನು ಕುಂಟ ಥೈಮೂರು ವಿಜಯಯಾತ್ರೆಗೈದು ಹೆಮ್ಮೆಪಟ್ಟ, ಶಿಬಿರದಿ ವಿಶ್ರಾಂತಿವೇಳೆ. ಇಂತಹ ಘನಕಾರ್ಯ ಗೈದ ಈ ಮುಖ ಜಯಶಾಲಿ ಯಾದಾಗ ಹೇಗೆ ಕಾಣಬಹುದೆಂದು ಯೋಚಿಸಿ. ಸೇವಕನಿಗೆ ಕನ್ನಡಿ ತರಲು ಹೇಳಿದ. ಥೈಮೂರು ಕನ್ನಡಿಯಲ್ಲಿ ಮುಖ ಕಂಡಕೂಡಲೆ ಜೋರಾಗಿ ಅಳಲು ಶುರು ಮಾಡಿದ ಸೇವಕನೂ ಅತ್ತ ಗಾಬರಿಯಾಗಿ ಯಾಕೆ ಅಳುತ್ತಿರುವಿರಿ ಮಹಾರಾಜ? ಎಂದ ಸೇವಕ ರಾಜ. ನನ್ನ ಕುರೂಪಿ ಮುಖ ನೋಡಿ ಅಳುಬಂತು. ನನ್ನಂತ ರಾಜನಿಗೆ ಇಷ್ಟು ವಿಕಾರ ಮುಖವೇಕೆ ಅಂತ? 'ಸರಿ–ಸೇವಕ ನಿನ್ಯಾಕೆ ಅತ್ತೆ?' ರಾಜನ ಪ್ರಶ್ನೆ.

ಸೇವಕ–ನೀವು ಕ್ಷಣಮಾತ್ರ ಮುಖ ನೋಡಿ ಅತ್ತಿರಿ ಸ್ವಾಮಿ ಅನುಗಾಲವೂ ನಿಮ್ಮ ಮುಖಕಂಡು ನಾನಷ್ಟು ಅಳಬೇಕು?



■ **ಭ್ರಮರಾಂಭ ಗೋಪಿನಾಥ್**
**26677574**

# ಅಪ್ಪನಿಗೊಂದು ಪತ್ರ



ಅಪ್ಪಾ, ಇಂದಿಗೆ ನಿಮಗೆ 36 ವರ್ಷ, 1 ತಿಂಗಳು, 15 ದಿನಗಳಾದವು. ನಾನು ಹುಟ್ಟಿದ ಮೇಲೆಯೇ ಅಲ್ಲವೇ ನೀವೂ ತಂದೆ ಯಾದದ್ದು? ಹಾಗಾಗಿ, ನಿಮಗೂ ಕೂಡ ನನ್ನಷ್ಟೇ ವಯಸ್ಸು. ಅಲ್ವಾ ಅಪ್ಪಾ?.. ಚಿಕ್ಕಂದಿನಿಂದಲೂ ನಾನು ಮಾಡುವ ಎಲ್ಲಾ ಕೆಲಸ ಗಳಲ್ಲಿಯೂ ನನಗೆ ಪ್ರೋತ್ಸಾಹ ನೀಡಿ, ಸಲಹೆ ನೀಡಿ, ನನ್ನ ಸ್ವಂತ ಕಾಲಿನ ಮೇಲೆ ನಿಲ್ಲುವ ಹಾಗೆ ಮಾಡಿರುವ ನಿಮಗೆ ಇದೋ ನನ್ನ ವಂದನೆ.


ನಿಮ್ಮೆದುರು ನಿಂತು ಮಾತನಾಡಲು ಆಗದೇ, ಪತ್ರ ಬರೆಯುತ್ತಿದ್ದೇನೆ.

ಅಪ್ಪಾ, ನಾನು ಹುಟ್ಟಿದಾಗಿನಿಂದ, ನಡೆಯಲು ಆರಂಭಿಸುವವರೆಗೂ ನನ್ನನ್ನು ಎತ್ತಿ, ಮುದ್ದಾಡಿರುವಿರಿ. ನಿದ್ದೆ ಮರೆತುಕೊಂಡು ಅಳುತ್ತಿದ್ದಾಗ ಲಾಲಿ ಹಾಡುಗಳನ್ನು ಅದೆಷ್ಟು ಹೇಳಿರುವಿರೋ ಅವೆಲ್ಲ ನನಗೆ ನೆನಪಿದೆ. ನೀವು ನನಗೆ ಯಾವಾಗಲೂ 'ತೂಗುವೆ ರಂಗನ, ತೂಗುವೆ ಕೃಷ್ಣನ, ತೂಗಿ ಜೋ ಜೋ ಹಾಡುವೆ' ಎಂಬ ಲಾಲಿ ಹಾಡನ್ನು ಹೇಳಿ, ನನ್ನನ್ನು ಮಲಗಿಸುತ್ತಿದ್ದಿರಿ. ಈಗಲೂ, ಈ ಹಾಡನ್ನು ಕೇಳಿದಾಗ ನನಗೆ ನಿದ್ದೆ ಬರುತ್ತದೆ. ಅಷ್ಟು ಅಕ್ಕರೆ, ವಾತ್ಸಲ್ಯದಿಂದ ನೀವು ಹಾಡುತ್ತಿದ್ದಿರಿ. ನನ್ನನ್ನು ನಿಮ್ಮ ಕಿರಿಯ ಸ್ನೇಹಿತನಂತೆ ಕಂಡಿರುವಿರಿ. ನಿಮ್ಮನ್ನು ನನ್ನ ಹಿರಿಯ ಮಿತ್ರನಂತೆ ಇಂದಿಗೂ ಆದರಿಸುತ್ತಿರುವೆ. ಏನಾದರೂ ಸಲಹೆ ಬೇಕಾದಲ್ಲಿ, ಮೊದಲು ಆ ವಿಷಯದ ಬಗ್ಗೆ ವಿಶ್ಲೇಷಿಸಿದ ನಂತರ ನಾನು ನಿಮ್ಮನ್ನೇ ಕೇಳುವುದು. ನೀವು ಅದನ್ನು ಕೂಲಂಕುಶವಾಗಿ ಪರಿಶೀಲಿಸಿದ ನಂತರ ಒಂದು ನಿರ್ಧಾರಕ್ಕೆ ಬಂದು, ಅದನ್ನು ನನಗೆ ಅರ್ಥವಾಗುವಂತ ಸಲಹೆ ನೀಡಿರುವಿರಿ. ನಿಮ್ಮ ಬಗ್ಗೆ ನನಗೆ ಬಹಳ ಅಭಿಮಾನವಿದೆ.

ನಾನು ಬೆಳೆದಂತೆಲ್ಲಾ, ನಾನು ನನ್ನ ಸ್ವಂತ ಬುದ್ಧಿಯಿಂದ, ಆತ್ಮ ವಿಶ್ವಾಸದಿಂದ ತೆಗೆದುಕೊಂಡಂತಹ ನಿರ್ಧಾರಗಳನ್ನು ಪ್ರೋತ್ಸಾಹಿಸಿ ದಂತೆಯೇ, ಕೆಲವೊಮ್ಮೆ ಅತಿ ಬುದ್ಧಿವಂತಿಕೆ, ಆತುರದಲ್ಲಿ ತೆಗೆದು ಕೊಂಡಂತಹ ನಿರ್ಧಾರಗಳನ್ನೂ ಖಂಡಿಸಿ, ಸರಿಯಾದ ನಿರ್ಧಾರ ಗಳನ್ನು ತೆಗೆದುಕೊಳ್ಳುವ ಹಾಗೆ ಮಾಡಿರುವಿರಿ. ನೀವು ನನ್ನ ಕೆಲಸ ಕಾರ್ಯಗಳನ್ನು ಚೆನ್ನಾಗಿ ವಿಮರ್ಶಿಸಿರುವಿರಿ. ಮಾಡಿದ ಕಾರ್ಯಗಳಲ್ಲಿ ಗೆದ್ದಾಗ, ಅಹಂಕಾರದಿಂದ ಬೀಗದೇ, ಹಾಗೆಯೇ ಕೆಲವು ಬಾರಿ ಸೋತಾಗ, ಬೇಸರದಿಂದ ಕುಗ್ಗದೇ, ಎಲ್ಲವನ್ನು ಸಮಾನ ರೀತಿಯಲ್ಲಿ ನೋಡುವ ಹಾಗೆ ನನಗೆ ಪಾಠವನ್ನು ಹೇಳಿರುವಿರಿ.

ನನ್ನನ್ನು ತೀಡಿ, ತಿದ್ದಿ, ಒಬ್ಬ ಸಜ್ಜನನಾಗಿ ಮಾಡಿರುವ ನಿಮಗೆ, ನಾನು ಏನು ಮಾಡಿದರೂ ಸಾಲದು. ನನ್ನ ಭವಿಷ್ಯವನ್ನು ಚೆನ್ನಾಗಿ ರೂಪಿಸಿಕೊಳ್ಳುವಂತೆ ಮಾಡಿರುವ ನೀವು, ನಾನು ಸ್ವತಂತ್ರನಾಗಿ, ಅಳುಕಿಲ್ಲದೇ, ಸೋಮಾರಿಯಾಗದೇ, ಬದುಕುವಂತೆ ಮಾಡಿರುವ ನೀವು, ನನ್ನ ತಂದೆಯೆಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಇಂದಿಗೂ ನನ್ನನ್ನು ಅತಿ ಹತ್ತಿರದಿಂದ ನೋಡಿ, ನನ್ನ ತಪ್ಪುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅದಕ್ಕೆ ಸರಿಯಾದ ದಾರಿಯನ್ನು ತೋರಿಸಿ, ನನ್ನ ಬೆನ್ನೆಲುಬಾಗಿ ನಿಂತಿರುವ ನಿಮಗೆ ನಾನು ಚಿರಋಣಿಯಾಗಿರುವೆ.

ನಿಮ್ಮ ಬಗ್ಗೆ ಬರೆಯಲು ಪದಗಳೇ ಇಲ್ಲ, ಕಣ್ಣಲ್ಲಿ ಆನಂದಬಾಷ್ಪ ನಿಲ್ಲುತ್ತಿಲ್ಲ.



■ **ಅನಿಲ್ ರಮೇಶ್**
**9980027189**



# ನಮ್ಮವರು

## ಡಾ. ಸ್ವಾಮಿನಾಥ್ ಜಿ.

ನಮ್ಮ ಬೃಹಚ್ಚರಣ ಸಮುದಾಯದ ಸಹೃದಯ ವ್ಯಕ್ತಿ ಡಾ. ಜಿ. ಸ್ವಾಮಿನಾಥ್ ಅವರನ್ನು ಪರಿಚಯಿಸಲು ಹರ್ಷ ವಾಗುತ್ತದೆ. ಶ್ರೀ ಗೋಪಾಲರಾವ್ ಮತ್ತು ಶ್ರೀಮತಿ ಶಕುಂತಲಮ್ಮ ದಂಪತಿಗಳ ಪುತ್ರ ಡಾ. ಸ್ವಾಮಿನಾಥ್ ಅವರು ಪ್ರಸಿದ್ಧ ಮನೋ ತಜ್ಞರಾಗಿ ಡಾ. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಮತ್ತು ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

1984ರಲ್ಲಿ ಡಿಪ್ಲೊಮಾ ಪದವಿಯನ್ನು ಮತ್ತು 1986ರಲ್ಲಿ ಮನಃಶಾಸ್ತ್ರದ ವಿಭಾಗದಲ್ಲಿ ಎಮ್.ಡಿ.ಪದವಿಯನ್ನು ನಿಮ್ಹಾನ್ಸ್ ಸಂಸ್ಥೆಯಿಂದ ಪಡೆದಿದ್ದಾರೆ. ಭಾರತೀಯ ಮನೋತಜ್ಞ ಸಂಘ, ಕರ್ನಾಟಕ ವಿಭಾಗಕ್ಕೆ ಕಾರ್ಯದರ್ಶಿಯಾಗಿ ಮತ್ತು ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. 2005–2008ರ 'ರಾಷ್ಟ್ರೀಯ ನಿರ್ವಾಹಕ' ಸಮಿತಿಗೆ ಆಯ್ಕೆಯಾಗಿ ರಾಷ್ಟ್ರೀಯ ಮಟ್ಟದಲ್ಲಿ ದಕ್ಷಿಣ ವಲಯವನ್ನು ಪ್ರತಿನಿಧಿಸಿದ್ದಾರೆ. ಭಾರತೀಯ ಮನೋತಜ್ಞ ಸಂಘದ ಭಾರತೀಯ 'ಮನೋತಜ್ಞ ಪತ್ರಿಕೆ', 'ರಾಷ್ಟ್ರೀಯ ಪತ್ರಿಕೆಯ' ಸಂಪಾದಕ ಮತ್ತು ಸಂಪಾದಕರಾಗಿ ಸೇವೆ ಸಲ್ಲಿಸಿ ಈಗ ದಕ್ಷಿಣ ವಲಯದ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಮಾಜಮುಖಿಯಾಗಿ ಸೇವೆ ಸಲ್ಲಿಸುವ ಮನೋಭಾವದ ವಿವೇಕಾನಂದ ಸ್ಮಾರಕ ಆಸ್ಪತ್ರೆಯ (ಬುಡಕಟ್ಟು ಆಸ್ಪತ್ರೆ) ಮನೋ ತಜ್ಞರಾಗಿ ಹೆಗ್ಗಡದೇವನಕೋಟೆಗೆ ಕಳೆದ 19 ವರ್ಷಗಳಿಂದ ಪ್ರತೀ ತಿಂಗಳ ಎರಡನೇ ಭಾನುವಾರ ಭೇಟಿ ಕೊಡುತ್ತಿದ್ದಾರೆ.

ಮಾನಸಿಕ ತೊಂದರೆಗೊಳಗಾಗಿರುವ ವಸತಿಹೀನರಿಗೆ ಪುನರ್ವಸತಿ ಕಲ್ಪಿಸುತ್ತಿರುವ 'ಚಿತ್ತಪ್ರಕಾಶ' ಧರ್ಮಸಂಸ್ಥೆಯವರು ನಡೆಸುತ್ತಿರುವ 'ಚಿತ್ತಧಾಮ'ಕ್ಕೆ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 'ಬಾಲಸಖ' ಧರ್ಮ ಸಂಸ್ಥೆಗೆ ಧರ್ಮದರ್ಶಿಗಳಾಗಿರುವ ಇವರು ಬೆಂಗಳೂರಿನ ಬಸವೇಶ್ವರ ನಗರದ ಎರಡು ಶಾಲೆಗಳಿಗೆ ಶೈಕ್ಷಣಿಕ ಇಲಾಖೆಯವರು ನೀಡುತ್ತಿರುವ ಮದ್ಯಾಹ್ನದ ಊಟವನ್ನು ತಲುಪಿಸುವ ವ್ಯವಸ್ಥೆ ಮಾಡಿರುತ್ತಾರೆ.

'ಇನ್‌ಫೋಸಿಸ್ ಪ್ರತಿಷ್ಠಾನ'ದವರೇ ಎರಡು ಕೋಟಿ ರೂಪಾಯಿಗಳ ಅನುದಾನದಿಂದ, 'ಮನೋರೋಗದಿಂದ ನರಳುತ್ತಿರುವ ಸ್ಥಿತಿವಂತರಲ್ಲದ ಗ್ರಾಮೀಣ ಮತ್ತು ಬುಡಕಟ್ಟು ಜನಾಂಗದವರಿಗೆ ಉಚಿತವಾಗಿ ಔಷಧೋಪಚಾರಗಳನ್ನು ಮಾಡುವುದಕ್ಕಾಗಿ ಇರುವ 'ಚಿತ್ತಸಂಜೀವಿನಿ' ಎಂಬ ಧರ್ಮಸಂಸ್ಥೆಗೆ ಅಧ್ಯಕ್ಷರಾಗಿದ್ದಾರೆ.

ಇತ್ತೀಚೆಗೆ ಡಾ. ಸ್ವಾಮಿನಾಥ್‌ರವರಿಗೆ 'ಕಡಂಬಾಸ್' 2013ರ ಪ್ರತಿಷ್ಠಿತ ಮನೋತಜ್ಞ ಪ್ರಶಸ್ತಿಯನ್ನು ಕರ್ನಾಟಕ ರಾಜ್ಯಪಾಲರಾದ ಗೌರವಾನ್ವಿತ ಭಾರದ್ವಾಜ್ ಹಾಗೂ ತಮಿಳುನಾಡು ರಾಜ್ಯಪಾಲರಾದ ಗೌರವಾನ್ವಿತ ರೋಸಯ್ಯ ಅವರಿಂದ ಪಡೆದಿದ್ದಾರೆ. (ಬೃಹಚ್ಚರಣ ಸಂಚಿಕೆಯಲ್ಲಿ ಪ್ರಕಟವಾಗಿದೆ).

ಶ್ರೀಯುತರು ಉತ್ಸಾಹಿ ಪರ್ವತಾರೋಹಣರಾಗಿ ಪಶ್ಚಿಮಘಟ್ಟ ಮತ್ತು ಹಿಮಾಲಯ ಪರ್ವತಶ್ರೇಣಿಯನ್ನು ಮೂರು ಬಾರಿ ಚಾರಣ ಮಾಡಿದ್ದಾರೆ. ಮತ್ತು ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಯಶಸ್ವಿಯಾಗಿ ಮಾಡಿದ್ದಾರೆ. ಡಾ. ಸ್ವಾಮಿನಾಥ್‌ರವರ ವಿವಿಧ ರೀತಿಯ ಸೇವಾ ಚಟುವಟಿಕೆಗಳು ನಮ್ಮ ಸಮುದಾಯಕ್ಕೆ ಮತ್ತು ನಾಡಿಗೆ ಮಾರ್ಗದರ್ಶಕವಾಗಿದೆ ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ. ಪತ್ನಿ ವಸುಧಾ ಎರಡು ಮಕ್ಕಳೊಂದಿಗೆ ಬೆಂಗಳೂರು ರಾಜಾಜಿನಗರದಲ್ಲಿ ವಾಸವಾಗಿದ್ದು ಅವರಿಗೆ ಬೃಹಚ್ಚರಣ ಸಂಘವು ಅವರ ಸೇವಾ ಮನೋಭಾವಕ್ಕೆ ಶುಭ ಕೋರುತ್ತದೆ.



*–ರಾ. ರಮೇಶ್*
*9886034048*

## ಶ್ರೀ ರಾಜಾಪುರ ಸುಬ್ಬರಾವ್

1891ರಲ್ಲಿ ಜನಿಸಿದ ಆನೇಕಲ್ಲಿನ ರಾಜಾಪುರ ಸುಬ್ಬರಾವ್ ರವರು, ಜವಳಿ ಅಂಗಡಿ ಸುಬ್ಬರಾವ್ ಎಂದು ಪ್ರಖ್ಯಾತರಾಗಿದ್ದರು. ಸಿಂಗಸಂದ್ರದ ಶ್ಯಾನುಭೋಗರಾಗಿದ್ದ ಇವರು ಬಟ್ಟೆ ಅಂಗಡಿ ಮತ್ತು ಚಾಮುಂಡೇಶ್ವರಿ ಮೋಟಾರ್ ಸರ್ವಿಸ್ ನಡೆಸುತ್ತಿದ್ದರು.

ಸುಬ್ಬರಾವ್‌ರವರು ತಮ್ಮ ಸಹೋದರ ಶ್ರೀ ಆರ್. ಕೃಷ್ಣಮೂರ್ತಿ ಅವರ ಜೊತೆ, ಕಿತ್ತಗಾನಹಳ್ಳಿ ನಾಗಾರಾಧನೆ ಏರ್ಪಡಿಸುವಲ್ಲಿ ಬಹಳ ಶ್ರಮವಹಿಸಿದ್ದರು.

ಇವರು ಆಗಿನ ಮಂತ್ರಿಗಳಾಗಿದ್ದ ಶ್ರೀ ಮಿರ್ಜಾ, ಶ್ರೀ ವಿ. ವೆಂಕಟಪ್ಪ, ಶ್ರೀ ಡಿ.ವಿ. ಗುಂಡಪ್ಪನವರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು. ಶ್ರೀ ಡಿ.ವಿ. ಗುಂಡಪ್ಪನವರು ಇವರ ನಿಧನಾ ನಂತರ ಇವರ ಬಗ್ಗೆ ಈ ಕೆಳಗಿನ ಮೆಚ್ಚುಗೆಯ ಮಾತುಗಳನ್ನು ಹೇಳಿದ್ದರು. "ಭಗವಂತನು ನನ್ನೆದುರಿಗೆ ಬಂದು ನಿಂತವರನ್ನು ದಯಪಾಲಿಸುವುದಾದರೆ, ಸುಬ್ಬರಾವ್‌ರವರು ಅನವರತವೂ ನನ್ನ ಜೊತೆಯಲ್ಲಿಯೇ ಇರಲಿ ಎಂದು ಕೇಳಿಕೊಳ್ಳುತ್ತೇನೆ".

ಇದಲ್ಲದೆ ಸಮಾಜಮುಖಿಯಾಗಿ ಕೆಲಸ ಮಾಡಿ ವಿದ್ಯಾರ್ಥಿ ಗಳಿಗೆ ವಾರಾನ್ನವನ್ನು ಏರ್ಪಡಿಸುತ್ತಿದ್ದರು ಹಾಗೂ ಒಬ್ಬ ಅರ್ಚಕರಿಗೆ ಮನೆಯನ್ನು ದಾನ ಮಾಡಿ ಇವರ ಧರ್ಮಬುದ್ಧಿಯನ್ನು ಮೆರೆದಿದ್ದಾರೆ. ಸುಬ್ಬರಾಯರಿಗೆ 4 ಜನ ಮಕ್ಕಳಿದ್ದು, ಅವರಲ್ಲಿ ಒಬ್ಬರಾದ ಶ್ರೀ ಆರ್.ಎಸ್. ಪದ್ಮನಾಭನ್‌ರವರು ಸಂಘದ ಸದಸ್ಯರು.

## ಕುಟುಂಬಕ್ಕೆ ಹೊಸ ಸೇರ್ಪಡೆ

ಸಂಘದ ಸದಸ್ಯ ಚಿ. ಶಶಾಂಕ್ ಮತ್ತು ಸೌ. ದಿವ್ಯಾ ದಂಪತಿಗಳಿಗೆ ದಿನಾಂಕ: 11.6.2015ರಂದು ಸುಪುತ್ರಿ ಜನಿಸಿದಳೆಂದು ತಿಳಿಸಲು ಹರ್ಷಿಸುತ್ತೇವೆ.

✦ ✦

ಸಂಘದ ಸದಸ್ಯ ಅಶ್ವಥ್ ನಾರಾಯಣ್‌ರವರ ಪುತ್ರ ಶ್ರೀ ರಾಘವ ಪ್ರಸಾದ್ ದಂಪತಿಗಳಿಗೆ ಗಂಡು ಮಗು ಜನನ.

✦ ✦

ಶ್ರೀಮತಿ ಪಲ್ಲವಿ ಮತ್ತು ಶ್ರೀ ನವೀನಶರ್ಮ ದಂಪತಿಗಳಿಗೆ ದಿನಾಂಕ : 23.4.2015ರಂದು ಸುಪುತ್ರಿ ಜನನವಾಗಿದೆ.

**ಸಂಘವು ನವಜಾತ ಶಿಶುಗಳಿಗೆ ಶುಭ ಹಾರೈಸುತ್ತದೆ.**

# 'ಶಕುನಗಳು' ಮತ್ತು 'ಹಲ್ಲಿ'
## ಮೂಢನಂಬಿಕೆ – ಶಕುನಗಳು

ಸಾಮಾನ್ಯವಾಗಿ ನಮ್ಮಲ್ಲಿ ಕಾಗೆ ಕಾ ಕಾ ಎಂದರೆ ನೆಂಟರು ಬರುತ್ತಾರೆ. ಅದು ಬೇರೆ ತರಹ ವಿಚಿತ್ರ, ಕರ್ಕಶವಾಗಿ ಕೂಗಿದರೆ ಸಾವಿನ ಸುದ್ದಿ, ಅದು ಬಾಯಲ್ಲಿ ಏನೋ ಕಚ್ಚಿಕೊಂಡಿರುವುದನ್ನು ನೋಡಿದರೆ ಸಿಹಿ ಊಟ ಸಿಗುತ್ತದೆ ಎಂದು ಶಕುನ ನುಡಿಯುತ್ತಾರೆ. ಅದಕ್ಕೆ ಪುರಂದರದಾಸರು ಕಾಗೆ ಕಾಕಾ ಎನ್ನಲಿ ಎಂದು ಕೃತಿ ಮಾಡಿರಬಹುದು. ಬೆಕ್ಕು ಅಡ್ಡ ಬಂದರೆ ಅಶುಭ, ಪಕ್ಷಿಯು ಮನೆಯ ಅಂಗಳದಲ್ಲಿ ಗೂಡುಕಟ್ಟಿ ಮೊಟ್ಟೆಯನ್ನಿಟ್ಟರೆ ಇನ್ನೊಂದು ಹೀಗೆ ವಿವಿಧ ನಂಬಿಕೆಗಳು ಬಹಳ ಹಿಂದಿನಿಂದಲೂ ಬಂದಿರುವುದು ಸ್ವಾರಸ್ಯಕರ ಸಂಗತಿ.

ಪ್ರಾಣಿ ಪಕ್ಷಿಗಳ ಆಧಾರಿತ ಈ ನಂಬಿಕೆಗಳು ಎಷ್ಟು ಸತ್ಯ, ಎಷ್ಟು ಸುಳ್ಳು? ಇದಕ್ಕೇನಾದರೂ ವೈಜ್ಞಾನಿಕ ಕಾರಣವಿದೆಯೇ? ಅಥವಾ ಹಿಂದಿನವರು ನಿರ್ದಿಷ್ಟ ಕಾರಣಕ್ಕಾಗಿ ಹುಟ್ಟು ಹಾಕಿದರೇ? ಯಾರಿಗೂ ಗೊತ್ತಿಲ್ಲ. ಯಾರೋ ಕೆಲವರು ನಂಬುವುದಿಲ್ಲ. ಇನ್ನೂ ಕೆಲವರು ನಂಬುತ್ತಾರೆ.

ಆದರೆ ಸರೀಸೃಪಗಳ ವಿಷಯದಲ್ಲಿ ಅದರಲ್ಲೂ ಹಲ್ಲಿ ಬಗೆಗಿನ ನಂಬಿಕೆಗಳು ಮಾತ್ರ ಸರ್ವವ್ಯಾಪಿಯಾಗಿದೆ. ನಾವು ಮಾತಾಡುವಾಗ ಹಲ್ಲಿ ಲೊಚಗುಟ್ಟಿದರೆ, (ಅದು ಅಲ್ಲೇ ಗೋಡೆಯ ಮೇಲಿದ್ದು ಲೊಚ ಗುಟ್ಟಿದರೆ) ನಾವಾಡಿದ ಮಾತು ಸತ್ಯವಾಗುತ್ತದೆಂದು ಪ್ರತೀತಿ ನೀವು ಕೇಳಿರಬಹುದು ಹಲ್ಲಿಯೇನಾದರೂ ಮೈಮೇಲೆ ಬಿತ್ತೋ ಅದೊಂದು ಮಹಾಶಕುನ! ಗೌಳಿಶಾಸ್ತ್ರ ಎಂಬ ಪ್ರಖ್ಯಾತ ಅಧ್ಯಾಯವೇ ಶಾಸ್ತ್ರದಲ್ಲಿದೆ. ಅದರ ಸಂಕ್ಷಿಪ್ತ ರೂಪವನ್ನು ಒಂಟಿಕೊಪ್ಪಲ್ ಮೊದಲಾದ ಪಂಚಾಂಗಗಳಲ್ಲಿ ಕೊಟ್ಟಿರುತ್ತಾರೆ. ಅದನ್ನು ನೀವೂ ಓದಿರಬೇಕು. ಇಲ್ಲದಿದ್ದರೆ ಒಮ್ಮೆ ಓದಿ ಸ್ವಾರಸ್ಯ ಹುಡುಕಿ.

ನಮಗೇನೋ ಹಲ್ಲಿ ಬಿದ್ದರೆ ಶುಭಾಶುಭ ನೋಡಲು ಗೌಳಿಶಾಸ್ತ್ರವಿದೆ. ಪಂಚಾಂಗವಿದೆ. ಆದರೆ ಬಡಪಾಯಿ ಹಲ್ಲಿ ಎಷ್ಟು ಹೆದರಿರಲಿಕ್ಕಿಲ್ಲ! ಅದಕ್ಕಾದ ದೈಹಿಕ, ಮಾನಸಿಕ ಆಘಾತವನ್ನು ನಾವು ಎಂದಾದರೂ ಆಲೋಚಿಸಿದ್ದೇವೆಯೇ? ನಮ್ಮ ಮೈಮೇಲೆ ಬಿದ್ದರೆ ಗಾಬರಿಯಿಂದ ನಾವು ಮೈಕೊಡವಿಕೊಂಡು ಓಡುತ್ತೇವೆ, ಹೊರತು ಅದು ಯಾವ




ಆ್ಯಂಗಲ್‌ನಲ್ಲಿ ಎಷ್ಟು ವೇಲಾಸಿಟಿಯಿಂದ ಎಲ್ಲಿ, ಹೇಗೆ ಬಿತ್ತು ಎಂದು ನೋಟ್ ಮಾಡುವ ವ್ಯವಧಾನ ನಮಗಿರುತ್ತದೆಯೆ?

ಇನ್ನು ಮೇಲಿನ ತುಟಿಯಲ್ಲಿ ಬಿದ್ದರೆ ಧನವ್ಯಯ ಕೆಳಗಿನ ತುಟಿಯ ಮೇಲೆ ಬಿದ್ದರೆ ಧನಲಾಭ! ಇಷ್ಟು ಶಾರ್ಪ್ ಬೌಂಡರಿಯನ್ನು ಹಲ್ಲಿ ಪಾಲಿಸಿದರೆ ಅದರ ಚಾಕಚಕ್ಯತೆ ಮೆಚ್ಚಲೇಬೇಕು.

ಅಂದರೆ ನಾವು ಮಲಗಿರುವಾಗ ಬಾಯ್ತೆರೆದು ಗೊರಕೆ ಹೊಡೆಯುತ್ತ ನಿದ್ರಿಸಿದಾಗ ಮೇಲ್ತುಟಿ ಅಥವಾ ಕೆಳತುಟಿಯ ಮೇಲೆ ಬಿದ್ದಿರಬೇಕು.

ಪಾಪ, ಆ ಹಲ್ಲಿ ಯಾವುದೋ ನೊಣವನ್ನೋ ಮಿಡತೆಯನ್ನೋ ಹಿಡಿಯಲು ಮುನ್ನುಗ್ಗಿದಾಗ ಆಯತಪ್ಪಿ ಬಿದ್ದುದಾಗಿರಬಹುದು. ಅದರ ಆಹಾರ ಹೇಗೂ ಹೋಯ್ತು. ಆದರೆ ನಮಗೆ ಮಾತ್ರ ದೋಷ ಪರಿಹಾರ ನೆಪದಲ್ಲಿ ಭಕ್ಷ್ಯ ಭೋಜ್ಯ. ಇನ್ನು ನೀವು ನೈವೇದ್ಯಗಳನ್ನು ಗಮನಿಸಬೇಕು. ವಿಶೇಷವೇನಿಲ್ಲ ಎಲ್ಲಾ ಸವಿರುಚಿ ಪದಾರ್ಥಗಳೇ.

ತಮಿಳ್ನಾಡಿನ ಕಂಚಿ ಕಾಮಾಕ್ಷಿ ದೇವಾಲಯದಲ್ಲಿ ಬಂಗಾರದ, ಬೆಳ್ಳಿಯ ಹಲ್ಲಿಗಳ ಮೂರ್ತಿಗಳಿದ್ದು ಭಕ್ತಾದಿಗಳು ಅವನ್ನೂ ದೇವರಂತೆ ಸಂದರ್ಶಿಸುತ್ತಾರೆ ಎಂದ ಮೇಲೆ ಹಲ್ಲಿಯ ಬಗ್ಗೆ ಒಂದು ಲೇಖನ ಬರೆಯೋಣವೆನ್ನಿಸಿ ಇದನ್ನು ಬರೆದಿದ್ದೇನೆ.



■ **ಗಾಯತ್ರಿ ಶೇಷಾಚಲ**
**25630483**

---

## ನಮ್ಮನ್ನಗಲಿದ ನಮ್ಮವರಿಗೆ – ಸಂಘದ ಶ್ರದ್ಧಾಂಜಲಿ

**ಎ.ವಿ. ಜಗದೀಶ್ 17.4.2015** ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ವಿಜೇತ ಶ್ರೀ ವೆಂಕಟಾಚಲಪತಿ ಶ್ರೀಮತಿ ಲಲಿತಮ್ಮ ಅವರ ಪುತ್ರ.

**ತಟ್ಟನಹಳ್ಳಿ ರಾಮಕೃಷ್ಣ (75)**, ಸದಸ್ಯ ಶ್ರೀಮತಿ ಶಕುಂತಲಾರವರ ಪತಿ

**ಶಿಡ್ಲಘಟ್ಟ ವೆಂಕಟರಾಮನ್ (82)** ಸದಸ್ಯ

**ತಟ್ಟನಹಳ್ಳಿ ಸುದರ್ಶನರಾಮ್ (55)**, ತಟ್ಟನಹಳ್ಳಿ ನಂಜುಂಡಯ್ಯ ನವರ ಪುತ್ರ (ತಿದ್ದುಪಡಿ)

## ಶಿವ – ಶಕ್ತಿ

ಯಜಮಾನನು ಶಟರ್ ಎಳೆದಿದ್ದನು
ಯಜಮಾನ್ತಿಯ ಅಂಗಡಿ ತೆರೆದೇ ಇತ್ತು
ಅದೂ ಶುಕ್ರವಾರ ಬೇರೆ, ಕೇಳಬೇಕೇ?
ಗುಂಪು ಗುಂಪು ಹೆಂಗಸರು, ಹೆಜ್ಜೆ ಹೆಜ್ಜೆಗೂ
ನಮನ, ಸ್ತುತಿ, ಗಂಭೀರ ದೀಪಾರತಿ.
ನಾ ಕೇಳಿದೆ ಅವನನ್ನು, ಏನು?
ಇಲ್ಲೇಕಿಲ್ಲ ಆ ಸಡಗರ, ಗುಲ್ಲು?
ಬಾಗಿಲೇಕೆ ಮುಚ್ಚಿದ್ದು, ಮೌನವೇಕೆ ಇಷ್ಟು?
ಸ್ಮಶಾನ ಮೌನ ನಿನಗೆ ಆಪ್ಯಾಯ, ಗೊತ್ತು!
ಅವನೆಂದ, ಬಾ ಸೋಮನ ದಿನ..
ತೋರಿಸುವೆ, ನನ್ನ ವಿಭೂತಿ ಏನೆಂದು!
ನೀನೂ ನನ್ನ ಅಂಶವೆಂದು...
ಆ ಯಜಮಾನರು ಯಾರು ಗೊತ್ತೇ?
ನಮ್ಮೆಲ್ಲರ ತಂದೆ, ಲೋಕದೊಡೆಯ ಶಿವ!
ಆಕೆ, ಬ್ರಹ್ಮನಿಂದ ಇರುವೆಯೊರಗೂ ಜನನಿ, ಶಕ್ತಿ!

**ಮೀರಾ ಕೃಷ್ಣಮೂರ್ತಿ**
**(ಡಿ.ವಿ.ಜಿ.ಯವರ ಮೊಮ್ಮಗಳು)**
**9740293012**



# ಅಡುಗೆ

## ಹಸಿಶುಂಠಿಗೊಜ್ಜು

**ಬೇಕಾಗುವ ಸಾಮಾನು:**

ಹಸಿಶುಂಠಿ, ಬ್ಯಾಡಗಿ ಮೆಣಸಿನ ಕಾಯಿ, ಹುಣಸೆಹಣ್ಣು, ರುಚಿಗೆ ಉಪ್ಪು, ಬೆಲ್ಲ, ಮೆಂತ್ಯ, ಎಳ್ಳು (ಬಿಳಿ ಅಥವಾ ಕರಿ)

**ಮಾಡುವ ವಿಧಾನ:**

ಮೆಂತ್ಯ, ಎಳ್ಳನ್ನು ಹುರಿಯಿರಿ, ಅದೇ ಬಿಸಿ ಬಾಂಡ್ಲಿಯಲ್ಲಿ, ಶುಂಠಿ, ಬ್ಯಾಡಗಿ ಮೆಣಸಿನ ಕಾಯಿಯನ್ನು ಹುರಿದುಕೊಳ್ಳಿ ತಣ್ಣಗಾದ ಮೇಲೆ ಈ ಎಲ್ಲಾ ಸಾಮಾಗ್ರಿಗಳನ್ನು ಒಟ್ಟಿಗೆ ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿ. ನೀರು ಸ್ವಲ್ಪ ಹಾಕಿ ಇದು ಆರೋಗ್ಯಕ್ಕೆ ಒಳ್ಳೆಯದು.

## ನಿಂಬೆಹಣ್ಣಿನ ಸಿಪ್ಪೆಯ ಗೊಜ್ಜು

ನಿಂಬೆಹಣ್ಣಿನ ಸಿಪ್ಪೆ, ಸಾರಿನ ಪುಡಿ, ಉಪ್ಪು, ಬೆಲ್ಲ, ಅರಿಸಿನ.

**ಬೇಕಾಗುವ ಸಾಮಾನು:**

ನಿಂಬೆಹಣ್ಣಿನ ಸಿಪ್ಪೆಯನ್ನು ಸಣ್ಣಗೆ ಹೆಚ್ಚಿಕೊಂಡು ಕುಕ್ಕರ್‌ನಲ್ಲಿ ನೀರು ಹಾಕಿ, ಅರಿಶಿನ ಹಾಕಿ ಬೇಯಿಸಿ. ಬೆಂದ ನಿಂಬೆಹಣ್ಣಿನ ಸಿಪ್ಪೆಗೆ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಸಾರಿನ ಪುರಿ (ಮೆಣಸಿನಪುಡಿ), ಬೆಲ್ಲ ಹಾಕಿ ಚೆನ್ನಾಗಿ ಕುದಿಸಿ ಇದು ಆರೋಗ್ಯಕ್ಕೆ ಒಳ್ಳೆಯದು.



■ ಸರ್ವಮಂಗಳ ಶ್ರೀನಿವಾಸ್
41632687

## ಮೈಸೂರು ಪಾಕ್

ಬೇಕಾಗುವ ಪದಾರ್ಥಗಳು : 1 ಲೋಟ ನೀರು, 1 ಲೋಟ ಕಡ್ಲೆ ಹಿಟ್ಟು, 2 ಲೋಟ ಸಕ್ಕರೆ, 2 ಲೋಟ ರೀಫೈನ್ಡ್ ಆಯಿಲ್, (ತುಪ್ಪ ಒಂದೆರಡು ಚಮಚವಾದರೆ ಸಾಕು)

ಮಾಡುವ ವಿಧಾನ : ಮೊದಲು ಒಂದು ಲೋಟ ನೀರನ್ನು ಒಂದು ದಪ್ಪ ತಳವಿರುವ ಪಾತ್ರೆಗೆ ಹಾಕಿ ಒಲೆಯ ಮೇಲಿಡಿ. ನೀರು ಕುದ್ದ ನಂತರ ಸಕ್ಕರೆ ಹಾಕಿ, ಸಕ್ಕರೆ ಕರಗಿದ ತಕ್ಷಣ ಒಂದು ಲೋಟ ರೀಫೈನ್ಡ್ ಆಯಿಲ್ ಹಾಕಿ. ಆಗ ಎಣ್ಣೆ, ಸಕ್ಕರೆ, ಎಲ್ಲ ಮಿಶ್ರವಾಗಿ ನೊರೆ ನೊರೆಯಾಗಿ ಉಕ್ಕಲು ಪ್ರಾರಂಭವಾಗುತ್ತದೆ. ಆಗ ಕಡ್ಲೆ ಹಿಟ್ಟನ್ನು ಹಾಕುತ್ತಾ ಬೆರೆಸಿ, ಉಳಿದ ರೀಫೈನ್ಡ್ ಆಯಿಲ್‌ನ್ನು ಸ್ವಲ್ಪ ಸ್ವಲ್ಪವಾಗಿ ಹಾಕುತ್ತ ಹಾಗೆಯೇ ಕೈ ಬಿಡದೆ ಕಲಕುತ್ತಾ ಇರಿ. ಪದಾರ್ಥಗಳೆಲ್ಲಾ ಹೊಂದಿಕೊಂಡು ಗಟ್ಟಿಯಾಗಿ ಪಾತ್ರೆ ತಳ ಬಿಡುತ್ತಾ ಬಂದಾಗ, ತುಪ್ಪ ಸವರಿದ ತಟ್ಟೆಗೆ ಹಾಕಿ, ಬೇಕಾದ ಆಕಾರಕ್ಕೆ ಕತ್ತರಿಸಬೇಕು.

ವಿ : ಕಡ್ಲೆಬೇಳೆಯನ್ನು ಸ್ವಲ್ಪ ಬಿಸಿಲಿಗೆ ಹಾಕಿ ಹಿಟ್ಟು ಮಾಡಿಸಿಟ್ಟುಕೊಂಡಿದ್ದರೆ, ಮೈಸೂರು ಪಾಕ್ ತುಂಬಾ ಚೆನ್ನಾಗಿರುತ್ತದೆ. ಅಂಗಡಿ ಹಿಟ್ಟು ಚೆನ್ನಾಗಿರುವುದಿಲ್ಲ.



■ ಸರಸ್ವತಿ ನಟರಾಜ್
26720144




**ತಂಪುದೇಹಕ್ಕೆ** : ಜೀರಿಗೆ ಹಾಕಿಟ್ಟ ನೀರನ್ನು ಕುಡಿಯುವುದರಿಂದ ದೇಹಕ್ಕೆ ತಂಪು ನೀಡುತ್ತದೆ. ಹಾಗೆಯೇ ಮೆಂತ್ಯದ ಪುಡಿಯನ್ನು ಮೊಸರಿಯಲ್ಲಿ ಹಾಕಿಕೊಂಡು ಕುಡಿದರೆ ದೇಹಕ್ಕೆ ಕಬ್ಬಿಣಾಂಶವು ಮತ್ತು ಮೊಸರಿನ ತಂಪು ಎರಡೂ ಸೇರಿ ಹೊಸ ಚೈತನ್ಯ ಲಭಿಸುತ್ತದೆ.

**ಆರ್ಥರೈಟಿಸ್ (ಸಂಧಿವಾತ)** : ಇರುವವರು ಅರಿಶಿನದ ಚಹಾ ಮಾಡಿ ಸೇವಿಸಿ ನಿವಾರಣೆ ಪಡೆಯಬಹುದು. ಅರ್ಧ ಲೀಟರ್ ನೀರಿಗೆ ಐವತ್ತು ಗ್ರಾಂ ಅರಿಶಿನದ ಪುಡಿ ಹಾಕಿ ಬಿಸಿ ಮಾಡಬೇಕು. ಸ್ವಲ್ಪ ಶುಂಠಿ ಹಾಕಬೇಕು. ಅಗತ್ಯವಿದ್ದರೆ ಇದಕ್ಕೆ ಸಕ್ಕರೆ, ಹಾಲು, ಸೇರಿಸಿ ದಿನವೂ ಸೇವಿಸುತ್ತಾ ಬಂದರೆ ಒಂದು ವಾರದ ಹೊತ್ತಿಗೆ ಸಂಧಿವಾತ ಮಾಯವಾಗುತ್ತದೆ.

**ಶುಚಿತ್ವ** : ಹೊರಗೆ ಹೋಗಿ ಬಂದ ಕೂಡಲೇ ಬಚ್ಚಲ ಮನೆಯಲ್ಲಿ ಕೈಕಾಲು, ಮುಖ ತೊಳೆಯುವ ಅಭ್ಯಾಸ ಒಳ್ಳೆಯದು. ಹೊರಗೆ ನಡೆದಾಡುವಾಗ ಅನೇಕ ಬಗೆಯ ಕ್ರಿಮಿಕೀಟಗಳು ನಮ್ಮ ದೇಹದ ಮೇಲೆ ಧಾಳಿ ನಡೆಸಿರುತ್ತವೆ. ವಿವಿಧ ಪ್ರಾಣಿಗಳ ಮಲ ಮೂತ್ರಗಳು ನಮಗೆ ತಿಳಿಯದಂತೆ ನಮ್ಮ ಪಾದರಕ್ಷೆಯ ಮೂಲಕ ನಮ್ಮ ಕಾಲುಗಳಿಗೂ ಅಂಟಿರುತ್ತವೆ. ರೋಗಾಣುಗಳು ಚರ್ಮದ ಮೂಲಕ ಧಾಳಿ ಮಾಡುವ ಸಾಧ್ಯತೆ ಇರುತ್ತವೆ. ಹಾಗಾಗಿ ಮನೆಗೆ ಬಂದ ಕೂಡಲೇ ಶುಚಿಯಾಗಿರುವುದು ಒಳ್ಳೆಯ ಹವ್ಯಾಸ.

ಸೇಬು, ಸೀಬೆ, ಕಬ್ಬು ಮುಂತಾದ ಕೆಲವು ಹಣ್ಣುಗಳನ್ನು ಚಾಕುವಿನಿಂದ ಹೆಚ್ಚದೇ ಕಚ್ಚಿ ತಿನ್ನುವುದರಿಂದ ದವಡೆಯ ಸಾಮರ್ಥ್ಯ ಹೆಚ್ಚಾಗುತ್ತದೆ. ಹಲ್ಲುಗಳೂ ಸದೃಢವಾಗುತ್ತದೆ. ಟೊಮೋಟೊದಲ್ಲಿ ಕೊಬ್ಬನ್ನು ತಗ್ಗಿಸುವ ಶಕ್ತಿ ಇದೆ ಮತ್ತು ರೋಗನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ. ದಿನವೂ ಟೊಮೊಟೋ ರಸವನ್ನು ಸೇರಿಸುವುದರಿಂದ ಆರೋಗ್ಯವೃದ್ಧಿಸುತ್ತದೆ. ಈರುಳ್ಳಿ, ನಿಂಬೆ, ಮೆಣಸು, ತುಳಸಿಗಳಲ್ಲಿಯೂ ಇದೇ ಶಕ್ತಿ ಇದೆ.

ನಿಮ್ಮಲ್ಲಿ ರಕ್ತ ಸಂಚಾರ ಸರಿಯಾಗಿದೆಯೇ ಇಲ್ಲವೆ ಎಂದು ತಿಳಿಯಲು ನೀವು ಯಾವುದೇ ಲ್ಯಾಬ್‌ಗೆ ಹೋಗಿ ಪರೀಕ್ಷಿಸಕೊಳ್ಳ ಬೇಕಾಗಿಲ್ಲ. ಒಂದು ಬೆಳ್ಳುಳ್ಳಿ ಸಿಪ್ಪೆ ಬಿಡಿಸಿ ನಿಮ್ಮ ಪಾದಗಳಲ್ಲಿ ಚೆನ್ನಾಗಿ ಉಜ್ಜಿಕೊಳ್ಳಬೇಕು, ಒಂದು ಗಂಟೆಯ ನಂತರ ನಿಮ್ಮ ಉಸಿರಾಟದಲ್ಲಿ ಬೆಳ್ಳುಳ್ಳಿ ವಾಸನೆ ಬಂದಿತೆಂದರೆ ನಿಮ್ಮ ರಕ್ತ ಪರಿಚಲನೆ ಸರಿಯಾಗಿದೆ ಎಂದು ಅರ್ಥ, ಇಲ್ಲವಾದರೆ ರಕ್ತ ಸಂಚಾರದಲ್ಲಿ ಯಾವುದೊ ಕೊರತೆ ಇದೆ ಎಂದು ಅರ್ಥ. ಇದು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಅರ್ಥ.

ಉಸಿರಾಡುವಾಗ ದೀರ್ಘವಾಗಿ ಉಸಿರನ್ನು ಒಳಗೆ ಎಳೆದು ಕೊಂಡು ನಿಧಾನವಾಗಿ ಹೊರಗೆ ಬಿಡಬೇಕು, ಇದರಿಂದ ಆಮ್ಲಜನಕವು ಹೃದಯದ ಎಲ್ಲ ಭಾಗಗಳಲ್ಲೂ ಸಮರ್ಪಕವಾಗಿ ಪೂರೈಕೆಯಾಗುತ್ತದೆ. ಮೆದುಳಿಗೂ ಒಳ್ಳೆಯದು. ಸಾಮಾನ್ಯವಾಗಿ ವಯಸ್ಸಾದಂತೆಲ್ಲಾ ಉಸಿರಾಟದ ವೇಗ ನಾನಾ ಕಾರಣಗಳಿಂದಾಗಿ ಬಹಳ ವೇಗ ನಡೆಯುತ್ತಿದೆ. ಆದ್ದರಿಂದ ನಲವತ್ತು ದಾಟುತ್ತಲೇ ಪ್ರಾಣಾಯಾಮವನ್ನು ಅಭ್ಯಾಸ ಮಾಡುತ್ತಾ ಬರುವುದರಿಂದ ಹೃದಯದ ಅನೇಕ ತೊಂದರೆಗಳು ನಿವಾರಣೆಯಾಗುತ್ತದೆ.

ಮನಸ್ಸಿನಲ್ಲಿ ತಳಮಳ, ಎದೆ ಬಡಿತ ತೀವ್ರವಾಗಿರುವವರು ರಾತ್ರಿ ನಾಲ್ಕೈದು ಬಿಲ್ವ ಎಲೆಗಳನ್ನು ನೀರಿನಲ್ಲಿ ಹಾಕಿಟ್ಟು ಬೆಳಗ್ಗೆ ಎದ್ದು ಕೂಡಲೆ ಮುಖ ತೊಳೆದು ಖಾಲಿ ಹೊಟ್ಟೆಯಲ್ಲಿ ಆ ಬಿಲ್ವದ ಎಲೆಗಳನ್ನು ಹಾಕಿಟ್ಟಿದ್ದ ನೀರನ್ನು ಕುಡಿಯುತ್ತಾ ಬಂದರೆ ಮನಸ್ಸು ಶಾಂತವಾಗಿರುತ್ತದೆ.



■ ಕೆ.ಎಲ್. ಶಾಂತ

## ರಸಸಂಜೆ 31.05.2015

# ಕರ್ನಾಟಕ ಸಂಗೀತ ಕಾರ್ಯಕ್ರಮ




ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದಿಂದ ದಿನಾಂಕ 3.5.2015 ಭಾನುವಾರದಂದು ಬೆಂಗಳೂರು ಬಸವನಗುಡಿಯ ನವಮಂತ್ರಾಲಯ ಕ್ಷೇತ್ರದಲ್ಲಿ 'ಸಂಗೀತ ಸಂಜೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಂಘದ ಸದಸ್ಯರಾದ ಶಶಿಧರ ಅವರು ಕಲಾವಿದರನ್ನು , ಒರಖಣಕೇಳುಗರನ್ನು ಬರಮಾಡಿಕೊಂಡು ಕಾರ್ಯಕ್ರಮ ನಿರೂಪಿಸಿದರು.

ನಮ್ಮ ಸಮುದಾಯದ ರಾಜಾಪುರ ವಂಶದ ಕಲಾವಿದರೇ ಕಾರ್ಯಕ್ರಮ ನಡೆಸಿಕೊಟ್ಟಿದ್ದು ವಿಶೇಷವಾಗಿತ್ತು. ವಿದ್ವಾನ್ ಆರ್.ಎ. ದಕ್ಷಿಣಾಮೂರ್ತಿಯವರ ವೀಣಾವಾದನ, ವಿದೂಷಿ ರಂಜನಿ ವೆಂಕಟೇಶ್ ಅವರಿಂದ ಮೃದಂಗ ಮತ್ತು ಆರ್.ಪಿ. ರವಿಶಂಕರ್ ಅವರಿಂದ ಘಟಂ ಏರ್ಪಡಿಸಲಾಗಿತ್ತು. ಸಂಜೆ 6.30ರಿಂದ 8.30ರ ವರೆಗೆ ಕಾಲ ಕಳೆದಿದ್ದೇ ತಿಳಿಯದಂತೆ ಬಹಳ ಸುಶ್ರಾವ್ಯವಾಗಿ ಸಂಗೀತ ಮೂಡಿಬಂದಿತು. ಎಲ್ಲರ ಮನಸ್ಸಲ್ಲೂ ಆ ಸಮಯ ಬಹಳ ಅಮೂಲ್ಯವಾಗಿ ಇದ್ದದ್ದು ಸಭಿಕರ ಮುಖದಲ್ಲಿ ಹೊರಹೊಮ್ಮುತ್ತಿತ್ತು.

ಶ್ರೀಯುತ ದಕ್ಷಿಣಾಮೂರ್ತಿಯವರು ನವರಾಗಮಾಲಿಕೆ ವರ್ಣದಿಂದ ಕಛೇರಿ ಪ್ರಾರಂಭಿಸಿ, ನಾಟರಾಗದಲ್ಲಿ ಗಣಪತಿ ಪ್ರಾರ್ಥನೆ, 'ಗಾನಮೂರ್ತಿ' ಕೀರ್ತನೆ, ಪ್ರಸಿದ್ಧವಾದ 'ನಗುಮೋಮು' ನುಡಿಸಿದ್ದು ಬಹಳ ರಂಜನೀಯವಾಗಿತ್ತು. ನಂತರದಲ್ಲಿ ಮೂಡಿಬಂದ ಕಲ್ಯಾಣವಸಂತ, ಅಣ್ಣಾಮಾಚಾರ್ಯರ ನಾನಾಟೀ ಬದುಕು ಹೆಚ್ಚು ಪರಿಚಯದಲ್ಲಿದ್ದುದು ಸಭಿಕರು ಸಂಗೀತದಲ್ಲಿ ಮುಳುಗಿದ್ದುದು ತಿಳಿಯುತ್ತಿತ್ತು. ಪ್ರಧಾನವಾಗಿ ಮೋಹನ ರಾಗವನ್ನು ಆಯ್ಕೆಮಾಡಿ ಅದರಲ್ಲೇ ತನಿಗೂ ಅವಕಾಶಕೊಟ್ಟರು. ತಾಳವಾದ್ಯದವರು ಒಬ್ಬರಿಗಿಂತ ಒಬ್ಬರು ಮೀರಿಸುವಂತಿದ್ದರು. ರಾಜಾಜಿಯವರ ಶಿವರಂಜನಿರಾಗದ 'ಕುರೈ ಒನ್ರುಂ ಇಲ್ಲೈ' ನುಡಿಸುವಾಗ ಸಭೆಯೆಲ್ಲಾ ತನ್ಮಯರಾಗಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಸಿಂಧು ಭೈರವಿ, ಎಲ್ಲರ ಅಚ್ಚುಮೆಚ್ಚಿನ ಮಧ್ಯಮಾವತಿಯ ಭಾಗ್ಯದಲಕ್ಷ್ಮಿ ಬಾರಮ್ಮ ನುಡಿಸಿದರು. ಕೇಳುಗರಿಗಾಗಿ ನುಡಿಸಿದ ಹರಿವರಾಸನಂ ಕೂಡ ಸುಶ್ರಾವ್ಯವಾಗಿತ್ತು.

ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಗೀತಕ್ಕೆ ಸ್ಥಳಾವಕಾಶ ಮಾಡಿಕೊಟ್ಟ ರಾಘವೇಂದ್ರ ಮಠದ ಆಡಳಿತ ಮಂಡಳಿಯ ಕೃಷ್ಣಮೂರ್ತಿಯವರಿಗೆ ಸಂಘದಿಂದ ಗೌರವ ಸೂಚಿಸಲಾಯಿತು. ಇದೇ ಸಂದರ್ಭದಲ್ಲಿ ದಕ್ಷಿಣಾಮೂರ್ತಿಯವರ 'ನಾದ ಸುನಾದ' ಎಂಬ ಮುದ್ರಿಕೆ ಅಡಕವನ್ನು ನಮ್ಮ ಸಂಘದ ಅಧ್ಯಕ್ಷ ಸೋಮಸುಂದರ ಅವರಿಂದ ಲೋಕಾರ್ಪಣೆ ಆಯಿತು.



ಕಾರ್ಯಕ್ರಮಕ್ಕೆ ಬರುವವರಿಗೆ ಮಳೆ ಅಡಚಣೆಯಾಗಿದ್ದರೂ ಸಭಾಭವನ ತುಂಬಿತ್ತು. **'ಹೊರಗೆ ವರ್ಷಧಾರೆ, ಒಳಗೆ ಸಂಗೀತ ಅಮೃತಧಾರೆ'** ಕೇಳುಗರಲ್ಲಿ ಹಿರಿಯರು ಹಾಗೂ ಸ್ಥಾಪಕ ಸದಸ್ಯರಾದ ಶ್ರೀ ಕೃಷ್ಣಸ್ವಾಮಿಯವರು ಉಪಸ್ಥಿತರಿದ್ದರು. ಕಲಾವಿದರಿಗೆ ಸಂಘದ ವತಿಯಿಂದ ಗೌರವ ಸಮರ್ಪಣೆ ಆದ ಬಳಿಕ ಲಘುಉಪಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# 'ಸಂಗೀತ ಸಂಜೆ' ಕಲಾವಿದರು



**ಶ್ರೀಯುತ ಆರ್.ಎ. ದಕ್ಷಿಣಾಮೂರ್ತಿಯವರು** ಹತ್ತು ವರ್ಷದ ಬಾಲಕನಿದ್ದಾಗಲೇ ಅವರ ತಂದೆ ಶ್ರೀ ಆರ್.ಎಸ್. ಅಶ್ವತ್ಥನಾರಾಯಣ ಮತ್ತು ತಾಯಿ ಪದ್ಮಾವತಿ ಅವರ ಪ್ರೋತ್ಸಾಹದಿಂದ ಸಂಗೀತ ಶಿಕ್ಷಣವನ್ನು ಪ್ರಾರಂಭಿಸಿದರು. ಸುಮಾರು ಹದಿನೈದು ವರ್ಷಗಳ ಕಾಲ ವಿದ್ವಾನ್ ಹೆಚ್.ಎಸ್. ಕೃಷ್ಣಮೂರ್ತಿಯವರಲ್ಲಿ ವೀಣಾವಾದನ ಕಲೆಯನ್ನು ಅಭ್ಯಸಿಸಿದರು. ಅಲ್ಲದೇ ಮೈಸೂರು ಸಂಸ್ಥಾನದ ವಿದ್ವಾನ್ ವೀಣೆ ಶೇಷಣ್ಣನವರ ಶಿಷ್ಯರಾದ ಆಸ್ಥಾನದ ಶ್ರೀ.ಆರ್.ಎಸ್. ಕೇಶವಮೂರ್ತಿಯವರಲ್ಲೂ ಶಿಷ್ಯವೃತ್ತಿ ಮುಂದುವರೆಸಿ. ಅದೇ ಪರಂಪರೆಯನ್ನು ಉಳಿಸಿ ಬೆಳೆಸುತ್ತಿದ್ದಾರೆ.

1983ರಿಂದ ಆಕಾಶವಾಣಿ ಮತ್ತು ದೂರದರ್ಶನದ ಎ ಶ್ರೇಣಿ ಕಲಾವಿದರಾಗಿದ್ದಾರೆ ಭಾರತದಾದ್ಯಂತ ಸಾರ್ವಜನಿಕ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾರೆ. ಬೆಂಗಳೂರು ಗಾಯನ ಸಮಾಜದ ವತಿಯಿಂದ ಸನ್ಮಾನಿತರಾಗಿದ್ದ ಚೌಡಯ್ಯ ಸ್ಮಾರಕ ಭವನದಲ್ಲಿ 29.1.2015ರಂದು ನಡೆದ 'ನವರಸ ಸಂಗೀತೋತ್ಸವ'ವನ್ನು youtube.comನಲ್ಲಿ ವೀಕ್ಷಿಸಬಹುದಾಗಿದೆ.

ಐ.ಐ.ಟಿ. ನವದೆಹಲಿಯಿಂದ ಎಂ.ಟೆಕ್ ಪದವೀಧರರಾಗಿದ್ದು ಟಾಟಾ ಸಂಸ್ಥೆಯಲ್ಲಿ ಹತ್ತು ವರ್ಷ ಕಾಲ ಉನ್ನತ ಹುದ್ದೆಯಲ್ಲಿದ್ದು ಪ್ರಸ್ತುತ ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

✦ ✦



**ಶ್ರೀಮತಿ ರಂಜನಿ ವೆಂಕಟೇಶ್** ಅವರು ಕರ್ನಾಟಕ ಸಂಗೀತ ಹಿನ್ನೆಯಲೆಯುಳ್ಳ ಪರಿವಾರ ದಲ್ಲಿ ಜನಿಸಿದವರು. ಸಂಗೀತ ವಿದೂಷಿ ಶ್ರೀಮತಿ ಬಿ.ವಿ. ಸರೋಜರವರ ಪುತ್ರಿಯಾದ ಇವರು ಮೃದಂಗವಾದನ ಕಲೆಯನ್ನು ಬಳ್ಳಾರಿಯ ಕೀರ್ತಿಶೇಷ ಜಿ. ಮರಿಯಣ್ಣನವರು, ವಿದ್ವಾನ್ ಶ್ರೀ ಎಸ್.ಜಿ. ರವಿ ಮತ್ತು ವಿದ್ವಾನ್. ಶ್ರೀ ಹೆಚ್.ಎಸ್. ಸುಧೀಂದ್ರ ಅವರಲ್ಲಿ ಅಭ್ಯಸಿಸಿದರು. ಅಲ್ಲದೆ, ಇವರು ಸಂಗೀತ ವಿದೂಷಿ ನೀಲಾರಾಮ್ ಗೋಪಾಲ ಅವರಲ್ಲಿ ಹಾಡುಗಾರಿಕೆಯನ್ನು ಕಲಿತರು. ಆಕಾಶವಾಣಿಯ ನಿಲಯದ 'ಎ ಶ್ರೇಣಿ' ಕಲಾವಿದರಾಗಿರುವ ಇವರು ಅನೇಕಾನೇಕ ಸಂಗೀತ ಕಲಾವಿದರಿಗೆ ಪಕ್ಕವಾದ್ಯ ನುಡಿಸಿ ಸಂಗೀತ ಕ್ಷೇತ್ರದಲ್ಲಿ ಅಪಾರ ಅನುಭಗಳಿಸಿದ್ದಾರೆ. ವಿದ್ವಾನ್ ಬಾಲ ಮುರಳೀಕೃಷ್ಣ, ವಿದೂಷಿ ಕನ್ಯಾಕುಮಾರಿ ಮತ್ತು ಇತರ ಪ್ರಸಿದ್ಧ ಕಲಾವಿದರಿಗೆ ಜೊತೆ ನೀಡಿದ್ದಾರೆ. ಶ್ರೀಮತಿ ರಂಜನಿಯವರು ದೇಶ ವಿದೇಶಗಳಲ್ಲಿ ಪ್ರವಾಸ ಮಾಡಿ ಯಶಸ್ವಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಖ್ಯಾತಿಯಾಗಿದ್ದಾರೆ.



ಶ್ರೀಯುತ ಆರ್.ಪಿ. ರವಿಶಂಕರ್‌ರವರು ಶ್ರೀ ಆರ್.ಎನ್. ಪದ್ಮನಾಭ ಮತ್ತು ಶ್ರೀಮತಿ ಶಾರದಾರವರ ಪುತ್ರರು. ಶ್ರೀಯುತರು ಘಟಂ ವಾದನವನ್ನು ಕರ್ನಾಟಕದ ಹೆಸರಾಂತ ವಾದಕರಾದ ವಿದ್ವಾನ್ ಶ್ರೀ ಶಶಿಕಿರಣ್, ಶ್ರೀ ಆರ್.ಎ. ರಾಜಗೋಪಾಲ್, ಶ್ರೀ ಟಿ.ಎ.ಎಸ್. ಮಣಿ ಅವರಲ್ಲಿ ಕಲಿತಿದ್ದಾರೆ. ಪ್ರಸ್ತುತ ಶ್ರೀಮತಿ ಸುಕನ್ಯಾ ರಾಂಗೋಪಾಲ್‌ರವರಲ್ಲಿ ಉನ್ನತ ಅಭ್ಯಾಸ ಮಾಡುತ್ತಿದ್ದಾರೆ. ಶ್ರೀಯುತರು ವಿವಿಧೆಡೆ ಸಂಗೀತ ಕಾರ್ಯಕ್ರಮ ಗಳಲ್ಲಿ ಪಕ್ಕವಾದ್ಯ ನುಡಿಸಿ ಸಂಗೀತ ಸೇವೆ ಮಾಡುತ್ತಿದ್ದಾರೆ.

ಕಲಾವಿದರ ಸಂಗೀತ ಕಾರ್ಯಕ್ರಮವನ್ನು ಬೃಹಚ್ಚರಣ ಸಂಘ 31.5.2015ರಂದು ಏರ್ಪಡಿಸಿದ್ದು ಶ್ರೀಯುತರನ್ನು ಸನ್ಮಾನಿಸಲಾಯಿತು.

## ಸಂಘದಿಂದ ಸನ್ಮಾನಿತರಾದ ಕಲಾವಿದರು





## ಪದಬಂಧ–2

ಶುಭ ಗಾಯತ್ರಿ ಎನ್.

| | | | | | | |
|---|---|---|---|---|---|---|
| 1 | | 2 | ■ | 3 | | 4 |
| | ■ | | ■ | | ■ | |
| | ■ | | | | ■ | |
| 6 | | ■ | ■ | ■ | 7 | |
| ■ | ■ | 8 | | | ■ | ■ |

**ಎಡದಿಂದ ಬಲಕ್ಕೆ**

1. ಮರಗಳಿಂದ ಮಾಡಿದ ಯುದ್ಧ (3)
3. ನವೆಯೋ, ರಿಯಾಯತಿಯೋ? (3)
5. ರಾಮನ ನಿರೀಕ್ಷೆಯಲ್ಲಿದ್ದ ಹಿರಿಯಳು (3)
6. ಸೂರ್ಯ (3)
7. ಕಪ್ಪು ಬಣ್ಣದ ಆನೆ (2)
8. ರಾಜ್ಯದ ಸಾಂಸ್ಕೃತಿಕ ರಾಜಧಾನಿ (3)

**ಮೇಲಿನಿಂದ ಕೆಳಕ್ಕೆ**

1. ಸರದೊಳಗೆ ಇಷ್ಟೊಂದು ನೀರಿದೆಯೇ? (4)
2. ಲಕ್ಷ್ಮೀಪತಿ (3)
3. ಮರಿ! ಅಲ್ಲಿ ದೊಡ್ಡ ಹಳ್ಳವಿದೆ (3)
4. ತರಹಾವರಿ ಕಾಯಿಪಲ್ಲೆಗಳು (4)

**ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಪದಬಂಧ 1ರ ಉತ್ತರ**

| | | | | | | |
|---|---|---|---|---|---|---|
| 7 ನಾ | ■ | 1 ನ | 8 ಗ | ರ | ■ | 9 ಸ |
| 2 ಕ | 10 ಸ | ■ | ಣ | ■ | 3 ಗು | ರಿ |
| ■ | ಮಂ | ಜ | ಪ | ತ್ತೂ | ರು | ■ |
| ■ | ಜ | ■ | ತಿ | ■ | ವಾ | ■ |
| 5 ವ | ಸ | ನ | ■ | 6 ಗ | ಣೆ | ತ |

*If un Delivered please return to :*

*President*

**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.

## ಓದುಗರ ಪತ್ರಗಳು




ಶ್ರೀ ಎಸ್.ಎನ್. ಕೃಷ್ಣಮೂರ್ತಿಯವರಿಗೆ ನಮಸ್ಕಾರ. ತಮ್ಮ 21.5.2015ರ ಪತ್ರ ತಲುಪಿ ಸಂತೋಷವಾಯಿತು. ತಾವು ನಾಗಾರಾಧನೆ ಚಿತ್ರಗಳ ಬಗ್ಗೆ ಶ್ಲಾಘಿಸಿರುವುದು ನಮ್ಮ ಸಂಘಕ್ಕೆ ಸಂತೋಷವಾಗಿದೆ. ಅಂತೆಯೇ, ಅರ್ಜುನ್ ಕಳುಹಿಸಿರುವ ಕಟ್ಟಡಗಳ ಸಂಗ್ರಹದ ಬಗ್ಗೆ, ಡಿ.ವಿ.ಜಿ.ಯವರ ಕಗ್ಗ, ಮಾನ್ಯ ರಂಗನಾಥ್‌ರವರ ಸಂವತ್ಸರದ ಕಥೆ ಚೆನ್ನಾಗಿದೆ ಎಂದೂ, ಮನೆಮದ್ದು, ನಾಗೇಶ್ ಅವರ ಅಭಿಯಾನ, ರಂಗೋಲಿ, ಡಿ.ವಿ.ಜಿ.ಯವರ ಜೀವನಧರ್ಮ, ಸತ್ಸಂಗದ ಬರಹಗಾರರಿಗೆ ವಂದನೆಗಳು ಸೂಚಿಸಿರುವುದು ನಮಗೆ ಹೆಮ್ಮೆಯಾಗಿದೆ. ಸುಶೀಲಧಾಮದ ಚಿತ್ರ, ಸರಸ್ವತಿಯವರ ಅಡುಗೆ, ಲಲಿತಾರವರ ರಾಮಾಯಣದ ಸಂಗ್ರಹ ಮೆಚ್ಚಿಕೊಂಡಿರುವುದಕ್ಕೆ ಅಭಾರಿಗಳು. ತಮ್ಮಂತಹ ಹಿರಿಯರು ಬೆನ್ನ ತಟ್ಟಿದಾಗ ಸಂಪಾದಕ ಮಂಡಳಿಗೆ ಇನ್ನೂ ಹೆಚ್ಚಿನ ಸ್ಫೂರ್ತಿ ಸಿಕ್ಕಂತಾಗುತ್ತದೆ. ಶುಭವಾಗಲಿ.

✦ ✦

ಮಾನ್ಯ ಆರ್.ಪಿ. ಮೋಹನ್, ತಾವು ದಿ: 2.6.2015ರಂದು ಇ–ಮೇಲ್ ಮೂಲಕ ಸಂಘವು ಏರ್ಪಡಿಸಿದ್ದ ವಿದ್ವಾನ್. ದಕ್ಷಿಣಾಮೂರ್ತಿಯವರ ವೀಣಾ ಸಂಗೀತ ಕಛೇರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವುದಕ್ಕೆ ಸಂಘ ಅಭಾರಿ. ತಮ್ಮಂತಹ ಕಲಾ ಪೋಷಕರು ಸಂಘಕ್ಕೆ ಸಹಕಾರ ನೀಡುವುದು ಸಂತೋಷ.

– ಸಂ.



## ನಮ್ಮನ್ನಗಲಿದ ಶತಾಯುಷಿ

### ಅಟ್ಟೂರು ಶ್ರೀಮತಿ ಜಯಲಕ್ಷಮ್ಮ (103)

ಶ್ರೀಮತಿ ಜಯಲಕ್ಷಮ್ಮನವರು, ದಿವಂಗತ ಅಟ್ಟೂರು ಲಕ್ಷ್ಮೀನಾರಾಯಣ ಅವರ ಪತ್ನಿ, ಪೋಷಕ ಸದಸ್ಯ ಶ್ರೀ ಎ.ಎಲ್. ಸುಂದರ ಮೂರ್ತಿ ಅವರ ತಾಯಿ ಹಾಗೂ ಪೋಷಕ ಸದಸ್ಯ ಶ್ರೀ ಎ.ವಿ. ರಾಮಸ್ವಾಮಿಯವರ ಅಜ್ಜಿ.

***ನಮ್ಮನ್ನಗಲಿದ ಹಿರಿಯ ಜೀವ ಜಯಲಕ್ಷಮ್ಮನವರಿಗೆ ಸಂಘವು ಶ್ರದ್ಧಾಂಜಲಿ ಅರ್ಪಿಸುತ್ತದೆ.***

Book-Post

To,

______________________

______________________

______________________

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com